ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 9 ಸಂ. 12 ಡಿಸೆಂಬರ್ 2012 ರೂ.25

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ
ಅನು: ಶ್ಯಾಮಲಾದೇವಿ

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)

ಒಂದು ದಿನ, ಹೂವೊಂದರ ಮೇಲೆ ಚಿಟ್ಟೆಯೊಂದು ಹಾರಾಡುತ್ತಿರುವುದನ್ನು ನಾನು ನೋಡಿದೆ. ಅದು ಒಂದು ಕ್ಷಣದಲ್ಲಿ ಹಾರಿಹೋಯಿತು.

ಇದ್ದಕ್ಕಿದ್ದಂತೆ, ವಿಶ್ವ ತನ್ನ ಬಾಹುಗಳನ್ನು ತೆರೆಯಿತು. ಹೊಸ ಆಯಾಮಗಳು ಸಂಜ್ಞೆಮಾಡಿ ಕರೆಯುತ್ತಿದ್ದವು. ಹೊಸ ಬೆಳಕುಗಳು ಮತ್ತು ರೆಕ್ಕೆಗಳು ಇದ್ದವು. ಮತ್ತು ನನ್ನೊಳಗಿನ ಯಾವುದೋ ಒಂದು ಉತ್ಕಟವಾಗಿ ಏರುತ್ತ ವಿಸ್ತರಿಸಿತು. ಕ್ಷಣಮಾತ್ರದಲ್ಲಿ, ನಾನು ನಲಿದೆ, ಅತ್ತೆ ಮತ್ತು ಸಾವಿರ ರೆಕ್ಕೆಗಳೊಂದಿಗೆ ಹಾರಿದೆ. ದೇವರ ಸಂತೈಸುವ ಸಾವಿರ ತೋಳುಗಳಲ್ಲಿ, ನಾನು ದಿವ್ಯಾನಂದವನ್ನು ಅನುಭವಿಸಿದೆ. ಮಿಲಿಯಾಂತರ ಜನ್ಮಗಳ ನನ್ನ ಅರಸುವಿಕೆ ಸಂತೃಪ್ತಿಯನ್ನು ಕಂಡುಕೊಂಡು, ನಾನು ಆ ಕ್ಷಣದಲ್ಲಿ ಸಾಯಲು ಇಚ್ಛಿಸಿದೆ.

ನಾನು ದೂರದ ಮೋಡಗಳಾಚೆ ಕುಳಿತು, ನನ್ನ ಭೂಮಿ ಮೌನವಾಗಿ ಚಲಿಸುತ್ತಿರುವುದನ್ನು ಮತ್ತು ನನ್ನ ಜನ ತಮ್ಮದೇ ದಾರಿಗಳು ಮತ್ತು ಬಲೆಗಳಲ್ಲಿ ಸದಾ ಕಾರ್ಯಮಗ್ನರಾಗಿರುವುದನ್ನು ನೋಡಿದಾಗ, ನನ್ನ ಮಾನವ ಭಾವನೆಗಳನ್ನು ವ್ಯಕ್ತಪಡಿಸಲು ಪದಗಳು ಸುಲಭವಾಗಿ ಸಿಗುತ್ತಿಲ್ಲ. ಕಾಲ, ವಿಧಿಗಳು ತನ್ನವೇ ಆದ ಕಾರ್ಯಕ್ರಮವನ್ನು ಹೊಂದಿವೆ. ಅವು, ಈಗಿನ ಎಲ್ಲ ಹೋರಾಟಗಳು ಮತ್ತು ಕನಸುಗಳನ್ನು ತನ್ನೊಳಗೆ ಅಡಗಿಸಿಕೊಂಡು, ಕಾಣದ ಮುಂಬರುವ ಕಾಲವನ್ನು ನಿಧಾನವಾಗಿ ಹೊರಗೆಡಹುತ್ತವೆ. ಮುಂಬರುವ ಕಾಲ, ಭಯಾನಕ ಅನುಭವಗಳನ್ನು ಹೊಂದಿರುವಂತೆಯೇ, ರೋಮಾಂಚಕಾರಿ ವಿಸ್ಮಯಗಳನ್ನೂ ಹೊಂದಿದೆ ಎನ್ನುವುದು ನನಗೆ ಗೊತ್ತು. ಕಾಲ, ಅವಕಾಶಗಳ ಅನೇಕ ದೋಣಿಗಳನ್ನು ತಂದಿದೆ ಎನ್ನುವುದೂ ನನಗೆ ಗೊತ್ತು. ಆದರೆ, ನನ್ನ ಜನ ಕತ್ತಲಲ್ಲಿ ತಡಕಾಡುತ್ತಾ ದೋಣಿಗಳನ್ನು ತಪ್ಪಿಸಿಕೊಳ್ಳುತ್ತಾರೆ. ಅನೇಕರು, ಟಾರ್ಚ್‌ಗಳೊಂದಿಗೆ ನೆರವು ನೀಡಲು ಮತ್ತು ಮಾರ್ಗದರ್ಶಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ, ಜನ ಈ ಪ್ರೀತಿ ಮತ್ತು ನೆರವಿನ ಹಸ್ತಗಳನ್ನು ಹಿಡಿದುಕೊಳ್ಳುವುದಿಲ್ಲ. ಅವರು ಇವನ್ನು ಕಳೆದುಕೊಳ್ಳುತ್ತಾರೆ ಮತ್ತು ದೂರ ಹೋಗುತ್ತಾರೆ.

ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಪದಗಳು ಸುಲಭವಾಗಿ ಸಿಗುತ್ತಿಲ್ಲ.

ಇದೊಂದು ಆಶ್ಚರ್ಯಕರ ಘಟನೆ. ನಾನು ಇದನ್ನು ನಿಮಗೆ ಹೇಳಲೇ ಬೇಕು.

ಈ ಸಂಜೆ, ನನಗೊಂದು ಹೊಸ ಪೆನ್ ಬಂದಿತು. ಅದು ಚೆನ್ನಾಗಿದೆ. ನಾನು ಹೊಸ ಪೆನ್‌ನಿಂದ ಬರೆಯಲು ಪ್ರಾರಂಭಿಸಿದೆ. ನಾನು ಬರೆಯುತ್ತಿರುವಂತೆಯೇ, "ಇನ್ನುಮುಂದೆ ಈ ಹೊಸ ಪೆನ್‌ನಿಂದಲೇ ಪ್ರತಿದಿನವೂ ಬರೆಯೋಣ ಮತ್ತು ಯಾವಾಗಾದರೊಮ್ಮೆ ಅಥವಾ ನಾನು ಹೊರಗೆ ಹೋದಾಗ ಹಳೇ ಪೆನ್ ಉಪಯೋಗಿಸೋಣ," ಎಂದು ಯೋಚಿಸಿದೆ. ಸ್ವಲ್ಪ ಸಮಯದ ನಂತರ, ಕಾರಣವೇ ಇಲ್ಲದೆ, ಹಳೇ ಪೆನ್ ಬರೆಯಲು ಕೈಗೆತ್ತಿಕೊಂಡೆ. ಅದು ಬರೆಯಲಿಲ್ಲ. ಅದು ಬರೆಯುವಂತೆ ಮಾಡಲು ಎಲ್ಲ ರೀತಿ ಪ್ರಯತ್ನಿಸಿದೆ. ಆದರೆ, ಇಲ್ಲ, ಅದು ಬರೆಯಲಿಲ್ಲ!

ಆಗ, ಇದ್ದಕ್ಕಿದ್ದಂತೆ, ನನಗೊಂದು ಯೋಚನೆ ಹೊಳೆಯಿತು. ನಾನು ಪೆನ್ನಿಗೆ ಬೆಳಕು ಮತ್ತು ಪ್ರೀತಿಗಳನ್ನು ಕಳಿಸಿದೆ, ಮತ್ತು ಅದರೊಂದಿಗೆ ಮಾತನಾಡಿದೆ. ಅದನ್ನು ಅಲಕ್ಷ್ಯ ಮಾಡುವುದು ನನ್ನ ಅಭಿಪ್ರಾಯವಾಗಿರಲಿಲ್ಲ ಮತ್ತು ನಾನು ಅದನ್ನು ನೋಯಿಸಿದ್ದರೆ, ವಿಷಾದಿಸುತ್ತೇನೆ ಎಂದು ಹೇಳಿದೆ. ಅನಂತರ, ಹೆಚ್ಚು ಶ್ರದ್ಧೆಯಿಂದ ಆ ಪೆನ್ ತೆಗೆದುಕೊಂಡು ಬರೆಯಲು ಪ್ರಾರಂಭಿಸಿದೆ. ಆಗ, ಪೆನ್ ಬರೆಯಲಾರಂಭಿಸಿತು!

ಆಗಿನ ನನ್ನ ಭಾವನೆಗಳು ಕಣ್ಣೀರಿಗೂ ಮಿಗಿಲಾಗಿದ್ದವು.

ಈ ಸೃಷ್ಟಿಯಲ್ಲಿ ಎಲ್ಲವೂ ಜೀವಂತವಾಗಿದೆ. ಎಲ್ಲದಕ್ಕೂ ಭಾವನೆಗಳು ಮತ್ತು ಸೆಂಟಿಮೆಂಟ್ಸ್ ಇವೆ. ಅವುಗಳಿಗೆ ಕೇವಲ ನಾವು ಮಾತ್ರ ಸಂವೇದನಾಶೀಲರಾಗಿಲ್ಲ. ನಮ್ಮ ಅಸಂವೇದನೆಯಿಂದ, ನಾವು ಎಷ್ಟೊಂದು ಸಾರಿ, ಎಷ್ಟೊಂದು ಚೇತನಗಳನ್ನು ನೋಯಿಸಿದ್ದೇವೋ!

ಅಮರರವರು ಬೇರೊಂದು ಭೂಮಿಯನ್ನು ಭೇಟಿ ಮಾಡಿದಾಗ, ಮತ್ತು ಅಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಅಕಸ್ಮಾತ್ತಾಗಿ ಹುಲ್ಲಿನ ಮೇಲೆ ಹೆಜ್ಜೆಯಿಟ್ಟರು. ಹುಲ್ಲು ನೋವಿನಿಂದ ಚೀರಿತು ಮತ್ತು ಅದಕ್ಕಾಗಿ ಸುತ್ತಲಿನ ಎಲ್ಲ ಮರಗಳೂ ಅವರನ್ನು ಆಕ್ಷೇಪಿಸಿದವು. ಅವರು ಇಂಥ ಅನೇಕ ಘಟನೆಗಳನ್ನು ನಮಗೆ ಹೇಳುತ್ತಿದ್ದರು. ಅವರ ಅನುಭವಗಳಿಂದ ನಾವು ಏನನ್ನೂ ಕಲಿಯಲಿಲ್ಲ ಮತ್ತು ಅಸಂವೇದನಾಶೀಲರಾಗಿಯೇ ಉಳಿದೆವು.

ನಿಜ ಹೇಳಬೇಕೆಂದರೆ, ಅವರಿಂದ ನಾವು ಹೆಚ್ಚು ಕಲಿತಿಲ್ಲ. ಒಂದು ವೇಳೆ ನಾವು ಕಲಿತಿದ್ದರೆ, ಇಷ್ಟೊಂದು ಅ-ಪ್ರೀತಿ ನಮ್ಮಲ್ಲಿ ಇರುತ್ತಿರಲಿಲ್ಲ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)
ಪ್ರಕಾಶ್‌ಮಾರ್ಗ್ (ಮರಾಠಿ)
ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/-
ಡಿಡಿಯನ್ನು
**'Manasa Light Age Foundation'**
ಹೆಸರಿನಲ್ಲಿ ಕಳುಹಿಸಬೇಕು.
ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಗುರೂಜಿಯವರೊಂದಿಗೆ ತಪೋನಗರಿಗರು ಪಟಾಕಿ ಹೊಡೆದು ದೀಪಾವಳಿಯನ್ನು ಆಚರಿಸಿದರು

### ಸುದ್ದಿ-ಸೂಚನೆ

- 11-11-2012 ಮತ್ತು 18-11-2012 ರಂದು ಅನುಕ್ರಮವಾಗಿ ಈ ವರ್ಷದ ಕೊನೆಯ ಶಂಬಲ ಮತ್ತು ರಾ ಗ್ರೂಪ್‌ಗಳು ತಪೋನಗರದಲ್ಲಿ ಸೇರಿದ್ದವು. ಈ ಗ್ರೂಪ್‌ಗಳ ಸದಸ್ಯರು ಗುರೂಜಿಯವರ ಆಸ್ಟ್ರಲ್ ಉಪಸ್ಥಿತಿಯಲ್ಲಿ, ಶಂಬಲ ಮಾಸ್ಟರ್‌ಗಳಿಂದ ಹಾಗೂ ರಾ-ಋಷಿಗಳಿಂದ ದೀಕ್ಷೆ ಪಡೆದುಕೊಂಡರು.
- 14-11-2012 ರಂದು ಸಂಭವಿಸಿದ ಗ್ರಹಣದ ಪ್ರಯುಕ್ತ ತಪೋನಗರ ನಿವಾಸಿಗಳು ಮೆಡಿಟೇಶನ್ ಹಾಲ್‌ನಲ್ಲಿ ಸೇರಿ ಆ ಸಮಯದಲ್ಲಿ ಲೈಟ್ ಚಾನಲ್ ಮಾಡಿದರು.
- 14-11-2012 ರಂದು ತಪೋನಗರ ನಿವಾಸಿಗಳೆಲ್ಲಾ ಗುರೂಜಿಯವರ ಸಮ್ಮುಖದಲ್ಲಿ ಸೇರಿ ಪಟಾಕಿಗಳನ್ನು ಸಿಡಿಸುವುದರ ಮೂಲಕ ದೀಪಾವಳಿ ಹಬ್ಬವನ್ನು ಆಚರಿಸಿದರು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 06 | ಗುರು | ಕೃಷ್ಣ ಅಷ್ಟಮಿ |
| 11 | ಮಂಗಳ | ಮಾಸ ಶಿವರಾತ್ರಿ |
| 13 | ಗುರು | ಅಮಾವಾಸ್ಯೆ |
| 16 | ಭಾನು | ಶೂನ್ಯಮಾಸ ಆರಂಭ |
| 20 | ಗುರು | ಶುಕ್ಲ ಅಷ್ಟಮಿ |
| 22 | ಶನಿ | ಶುಕ್ಲ ದಶಮಿ |
| 25 | ಮಂಗಳ | ಕ್ರಿಸ್‌ಮಸ್ |
| 28 | ಶುಕ್ರ | ಪೂರ್ಣಿಮಾ |
| 30 | ಭಾನು | ಅಖಂಡ ಧ್ಯಾನ |

ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11-12<br>ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12-1 |
| 25-12-12 | ಕ್ರಿಸ್‌ಮಸ್ ವಿಶೇಷ ಧ್ಯಾನ: ಮಧ್ಯಾಹ್ನ 12-1 |
| 30-12-12 | ಅಖಂಡ ಧ್ಯಾನ: ಬೆಳಿಗ್ಗೆ 6 - ಸಂಜೆ 6 |

30-12-2012
ತಪೋನಗರದಲ್ಲಿ ಅಖಂಡ ಧ್ಯಾನ
ಬೆಳಿಗ್ಗೆ 6 - ಸಂಜೆ 6
ಇದರಲ್ಲಿ ಭಾಗವಹಿಸಲು ಇಚ್ಛಿಸುವವರು
ತಮ್ಮ ಹೆಸರನ್ನು ನಮ್ಮ ಆಫೀಸಿನಲ್ಲಿ
ತಾವು ಭಾಗವಹಿಸುವ ಸಮಯದೊಂದಿಗೆ
25-12-2012ರೊಳಗೆ
ನೋಂದಾಯಿಸಬೇಕಾಗಿ ವಿನಂತಿ.

16-12-2012 ರಿಂದ 15-1-2013 ರವರೆಗಿನ ಶೂನ್ಯಮಾಸದಲ್ಲಿ ಹೆಚ್ಚು ಧ್ಯಾನ ಮಾಡುವುದರಿಂದ, ನಮಗೆ ತಿಳಿಯದಿರುವ ಅನೇಕ ರೀತಿಯಲ್ಲಿ ಸಹಾಯ ದೊರಕುತ್ತದೆ.

ಈಗ ಗುರೂಜಿಯವರು 'Speaking Tree' ಯ ಮಾಸ್ಟರ್‌ಗಳ ಸಾಲಿಗೆ ಸೇರ್ಪಡೆಯಾಗಿದ್ದಾರೆ. ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

ಈಗ www.lightagemasters.com ವೆಬ್‌ಸೈಟ್ ಮೂಲಕ ಹೊರದೇಶಗಳಲ್ಲಿ ವಾಸಿಸುವ ನಮ್ಮ ಸಾಧಕರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಆನ್‌ಲೈನ್‌ನಲ್ಲಿ ಹಣ ಕಳುಹಿಸುವ ವ್ಯವಸ್ಥೆಯನ್ನು ಒದಗಿಸಲಾಗಿದೆ.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

**ಸಂ: ಜಯಂತ್ ದೇಶ್‌ಪಾಂಡೆ; ಅನು: ಪಾಂಡುರಂಗ**

- ಈಗ, ಒಂದು ಸಾವಿರಕ್ಕೂ ಹೆಚ್ಚು ಶಾಲೆಗಳಲ್ಲಿ ನಿಯಮಿತವಾಗಿ ಸುಮಾರು ಅರ್ಧ ಮಿಲಿಯನ್ ಮಕ್ಕಳು ಲೈಟ್ ಚಾನಲಿಂಗ್ ಮಾಡುತ್ತಿದ್ದಾರೆ. ಇದನ್ನು ಕೇವಲ ಒಂದು ಚಿಕ್ಕ ವಾಲಂಟಿಯರ್‌ಗಳ ಗ್ರೂಪ್ ಸಾಧಿಸಿದೆ. ಅವರ ಅವಿರತ ಪ್ರಯತ್ನದ ಜೊತೆಗೆ ಶಾಲೆಗಳ ಸಿಬ್ಬಂದಿ ವರ್ಗ, ಶಿಕ್ಷಕರ ಮತ್ತು ಮಕ್ಕಳ ಅಗಾಧವಾದ ನೆರವು ಇವರ ಜೊತೆಗೂಡಿದೆ.
- ಒಂದು ಹೊಸ ಲೈಟ್ ಚಾನಲಿಂಗ್ ಕೇಂದ್ರ ಬೆಂಗಳೂರಿನ ಕುಕ್ ಟೌನ್‌ನಲ್ಲಿ ಪ್ರಾರಂಭವಾಗಿದೆ. ಇಲ್ಲಿನ ಒಂದು ದೇವಸ್ಥಾನದಲ್ಲಿ ಪ್ರತಿ ಶುಕ್ರವಾರ ಲೈಟ್ ಚಾನಲಿಂಗ್ ಕಾರ್ಯಕ್ರಮ ನಡೆಸಲು ದೇವಸ್ಥಾನದ ಆಡಳಿತ ವರ್ಗದವರು ಅನುಮತಿ ನೀಡಿದ್ದಾರೆ. ■

## ಲೈಟ್ ಚಾನಲಿಂಗ್ ಅನುಭವಗಳು

ಒಂದು ಶನಿವಾರ ನಾನು ಕನ್ಯಾಕುಮಾರಿಗೆ ಹೋಗಿದ್ದಾಗ, ಆಕಾಶ ಕಾರ್ಮೋಡದಿಂದ ತುಂಬಿತ್ತು ಮತ್ತು ಕಳೆದ ಕೆಲವು ದಿನಗಳಿಂದ ಜನರು ಸೂರ್ಯನನ್ನೇ ಕಂಡಿರಲಿಲ್ಲ ಎಂದು ನನಗೆ ತಿಳಿದುಬಂದಿತು. ಭಾನುವಾರ ರಾತ್ರಿ ಭಾರಿ ಮಳೆ ಸುರಿಯಿತು. ಈ ಮಳೆ ನನ್ನಲ್ಲಿ ಆತಂಕವನ್ನು ಉಂಟುಮಾಡಿತ್ತು ಏಕೆಂದರೆ ಮರುದಿನ ನಾನು ಲೈಟ್ ಚಾನಲಿಂಗ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆ. ನನಗೆ ದಾರಿಕಾಣದೆ ಗುರೂಜಿ ಮತ್ತು ಋಷಿಗಳನ್ನು ಪ್ರಾರ್ಥಿಸಿದೆ.

ಆಶ್ಚರ್ಯವೆಂಬಂತೆ, ಬೆಳಿಗ್ಗೆ ಎದ್ದಾಗ ನಿರ್ಮಲವಾದ ಆಕಾಶವನ್ನು ನೋಡಿದೆ. ನನ್ನ ಹೃದಯಾಂತರಾಳದಿಂದ ಋಷಿಗಳಿಗೆ ಮತ್ತು ಗುರೂಜಿಯವರಿಗೆ ಕೃತಜ್ಞತೆಗಳನ್ನು ಅರ್ಪಿಸಿದೆ. ನಂತರ ಲೈಟ್ ಚಾನಲಿಂಗ್ ನಡೆಸಲು ಶಾಲೆಗೆ ಹೋದೆ.

– ಸ್ವಾಮಿನಾಥನ್ ಸಿ., ವಾಲಂಟಿಯರ್

ನಾನು ವಾಸವಾಗಿರುವ ಜಾಗ, ರಿಯೋ ಡಿ ಜನ್ಯೆರೋ ಪರ್ವತ ಶ್ರೇಣಿಯ ಮಳೆಗಾಡಿನಲ್ಲಿದೆ. 1–11–2011ರಂದು ಬ್ರೆಜಿಲ್‌ನ ಇತಿಹಾಸದಲ್ಲೇ ಭೀಕರ ಭೂಕುಸಿತ ದುರಂತ ಸಂಭವಿಸಿತ್ತು. ಸಾವಿರಾರು ಜನ ಅಸುನೀಗಿದರು. ಅನೇಕ ಪರ್ವತಗಳು ಇನ್ನೂ ಸಸ್ಯ ಸಂಪತ್ತಿಗೆ ಅನರ್ಹವಾಗಿದ್ದು, ಅವು ಬಿರುಕುಗಳಿಂದ ತುಂಬಿರುವುದರಿಂದ, ಈ ನಗರ ಇನ್ನೂ ಸೂಕ್ಷ್ಮ ಸ್ಥಿತಿಯಲ್ಲಿದೆ.

ಇಂದು (1–11–2012) ಭಾರೀ ಗುಡುಗು, ಸಿಡಿಲು ಮತ್ತು ಧಾರಾಕಾರ ಮಳೆ ಶುರುವಾಯಿತು. ದೇವರೇ ಕಳುಹಿಸಿಕೊಟ್ಟಂತಿರುವ ನನ್ನ ಹೊಸ ಸ್ನೇಹಿತ ಮನೋಜ್ ದೇಶಪಾಂಡೆಯವರನ್ನು ಸಂಪರ್ಕಿಸಿ, ಈ ಕಡೆಗೆ ಬೆಳಕನ್ನು ಕಳುಹಿಸಲು ಅವರನ್ನು ಕೇಳಿಕೊಂಡೆ. ತಕ್ಷಣ ನನ್ನ ಇತರ ಹೊಸ ಸ್ನೇಹಿತರಾದ ಆದಿತ್ಯ ವರುಣ್, ಹೇಮಂತ್ ಶರ್ಮ, ಮತ್ತು ದೀಪ್ತಿ ರಾಘವೇಂದ್ರ ಆನ್‌ಲೈನ್ ಸಂಪರ್ಕದಲ್ಲಿ ಬಂದರು. ಅವರು ನಮಗೆ ಪ್ರೀತಿ ಮತ್ತು ಬೆಳಕನ್ನು ಕಳುಹಿಸಲು ಪ್ರಾರಂಭಿಸಿದರು.

ಒಂದು ಘಂಟೆಯ ನಂತರ, ಒಂದು ದೊಡ್ಡ ಗಾಳಿಯುಂಟಾಗಿ ಭಾರೀ ಮೋಡಗಳನ್ನು ಚದುರಿಸಿತು ಮತ್ತು ಧಾರಾಕಾರ ಮಳೆ ನಿಂತಿತು. ಸೂರ್ಯ ಕಾಣಿಸಿಕೊಂಡು, ಆಕಾಶ ಪುನಃ ನೀಲಿ ಬಣ್ಣಕ್ಕೆ ತಿರುಗಿತು. ನಾನು ಹೊರಗೆ ಹೋಗಿ ದೇವರು ಮತ್ತು ಋಷಿಗಳೊಂದಿಗೆ ಮಾತನಾಡಿದೆ. ನನ್ನ ಕಣ್ಣುಗಳು ಹನಿಗೂಡಿ, ಗಂಟಲು ಕಟ್ಟಿತು. ನನ್ನ ಪಟ್ಟಣಕ್ಕೆ ಮತ್ತು ನನ್ನ ಜನರಿಗೆ ನೀಡಿದ ಆಶೀರ್ವಾದ ಹಾಗೂ ಸಹಾಯಕ್ಕಾಗಿ, ಪ್ರೀತಿ ಮತ್ತು ಧನ್ಯತೆಯಿಂದ ಅವರಿಗೆ ತಲೆಬಾಗಿ ನಮಿಸಿದೆ.

– ನ್ಯಾನ್ಸಿ ರೊಜೇರಿಯಾ, ಬ್ರೆಜಿಲ್: ಫೇಸ್‌ಬುಕ್‌ನಲ್ಲಿ

## ತಪೋನಗರ ಡೈರಿ

**ಸೀಮಾ ಅಲ್‌ವೇಲ್ ಸೋಮಯಾಜಿ; ಅನು: ವರ್ಷಾ ದೀಪಕ್**

ಹಬ್ಬಗಳ ಕಾಲ ಅಕ್ಟೋಬರ್ ತಿಂಗಳಲ್ಲೂ ಮುಂದುವರಿದಿದೆ. ತಪೋನಗರದಲ್ಲಿ ಯಾವಾಗಲೂ ಈ ವಿಶೇಷ ದಿನಗಳ ಹಿಂದಿನ ಆಧ್ಯಾತ್ಮಿಕ ಸಾರಕ್ಕೆ ಹೆಚ್ಚು ಗಮನವನ್ನು ನೀಡಲಾಗುತ್ತದೆ. ನವರಾತ್ರಿಯ ಸಮಯದಲ್ಲಿ ಧ್ಯಾನದ ಒಂದು ವಿಶೇಷ ತಂತ್ರವನ್ನು ಅಭ್ಯಾಸ ಮಾಡಲಾಯಿತು. ಈ ಸಮಯದಲ್ಲಿ ಅನೇಕರಿಗೆ ಆಧ್ಯಾತ್ಮಿಕ ಅನುಭವಗಳಾದವು.

ಆಯುಧಪೂಜೆಯ ಹಿಂದಿನ ಆಧ್ಯಾತ್ಮಿಕ ಉದ್ದೇಶವೇನೆಂದರೆ, ನಮ್ಮ ದಿನನಿತ್ಯ ಬಳಕೆಯ ವಾಹನಗಳು, ಯಂತ್ರಗಳು ಮುಂತಾದ ಮುಖ್ಯವಸ್ತುಗಳನ್ನು ಚೈತನ್ಯೀಕರಿಸುವುದಾಗಿದೆ. ತಪೋನಗರದಲ್ಲಿ ಪ್ರತಿವರ್ಷವೂ ಸಾಮೂಹಿಕವಾಗಿ ಚೈತನ್ಯಗೊಳಿಸುವ ಸೆಷನ್ ಅನ್ನು ಗುರೂಜಿಯವರು ನಡೆಸುತ್ತಾರೆ. ಆಯುಧಪೂಜೆಯ ಮುನ್ನಾದಿನ ಎಲ್ಲಾ ನಿವಾಸಿಗಳೂ ತಮ್ಮತಮ್ಮ ವಾಹನಗಳನ್ನು ತೊಳೆದು ಮರುದಿನದ ಪೂಜೆಗಾಗಿ ಅಣಿಗೊಳಿಸುವಲ್ಲಿ ಮಗ್ನರಾಗಿದ್ದರು. ತಪೋವನದಲ್ಲಿ ಕೆಲಸಕ್ಕಾಗಿ ಉಪಯೋಗಿಸುವ ಟ್ರ್ಯಾಕ್ಟರ್ ಆಗಷ್ಟೇ ಹಾಕಿರುವ ಬಣ್ಣದಿಂದಾಗಿ ಕಂಗೊಳಿಸುತ್ತಿತ್ತು. ಇಬ್ಬರು ಮಕ್ಕಳು ಈ ಪೂಜೆಗಾಗಿ ತಮ್ಮ ಸೈಕಲ್‌ಗಳನ್ನು ಕೂಡಾ ತಂದಿದ್ದರು. ತಪೋವನ ಪಾರ್ಕಿಂಗ್ ಜಾಗದಲ್ಲಿ, ಹೂವುಗಳಿಂದ ಅಲಂಕೃತಗೊಂಡಿದ್ದ ವಾಹನಗಳನ್ನು ಒಪ್ಪವಾಗಿ ಜೋಡಿಸಿ ನಿಲ್ಲಿಸಿದ್ದರು. ಗುರೂಜಿಯವರು ಬಂದ ನಂತರ ಅಲ್ಲಿ ಸೇರಿದ್ದವರೆಲ್ಲಾ ಕಣ್ಣುಮುಚ್ಚಿ ವಾಹನಗಳಿಗೆ ಬೆಳಕನ್ನು ಹರಿಸಿದರು ಮತ್ತು ಸಿಹಿತಿಂಡಿಗಳನ್ನು ಹಂಚಿ, ಇಲ್ಲಿನ ಕೆಲಸಗಾರರಿಗೆ ಉಡುಗೊರೆಗಳನ್ನು ನೀಡಿದರು. ಅದಾದ ನಂತರ ಆಫೀಸಿನಲ್ಲಿರುವ ಉಪಕರಣಗಳನ್ನು ಚೈತನ್ಯೀಕರಿಸಲಾಯಿತು.

ಎಲ್ಲರೂ ಅಲ್ಲಿಂದ ಹೊರಡುವ ಮುನ್ನ ಅನಿರೀಕ್ಷಿತವಾಗಿ ಒಂದು ಗ್ರೂಪ್ ಫೋಟೋ ತೆಗೆಯಲಾಯಿತು. ಇದು ಸದಾ ನಮ್ಮ ಹೃದಯದಲ್ಲುಳಿಯುವಂಥ ಮತ್ತೊಂದು ಸುಂದರ ಕ್ಷಣವಾಗಿತ್ತು. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

14–10–2012

ಕಳೆದ ಭಾನುವಾರ ನಾನು ಇಲ್ಲಿರಲಿಲ್ಲ. ನನ್ನ ಪರವಾಗಿ ಜಯಂತ್ ಮಾತನಾಡಿದರು. ಅವರು ಬಹಳ ಚೆನ್ನಾಗಿ ಮಾತನಾಡಿದರಂತೆ. ನಾನು, ಅವರು ಅಥವಾ ಯಾರೂ ಮಾತನಾಡದೇ ಇದ್ದರೂ ಈ ಎರಡು ಗಂಟೆಗಳು ಒಂದು ರೀತಿಯ ದೈವಿಕ ಸಮಯವೆಂದು ನೀವು ತಿಳಿಯಬೇಕೆಂದು ಬಯಸುತ್ತೇನೆ. ಅದು ಋಷಿಗಳೊಡನೆ ಒಂದು ಅಪಾಯಿಂಟ್‌ಮೆಂಟ್ ತೆಗೆದುಕೊಂಡಂತೆ. ಅವರ ಇರುವಿಕೆಯೇ ಸಾಕು. ಅನೇಕ ಜನರು ಮತ್ತು ಸೂಕ್ಷ್ಮಲೋಕದ ಜನರು ಇಲ್ಲಿಗೆ ಬಂದು ಋಷಿಗಳಿಂದ ಸಲಹೆ ಮತ್ತು ಮಾರ್ಗದರ್ಶನ ಪಡೆಯುತ್ತಾರೆ. ವೆಬ್‌ಕಾಸ್ಟ್ ನೋಡುವವರೆಲ್ಲರೂ ಇಲ್ಲಿಗೆ ಸಂಪರ್ಕಿತರಾಗುತ್ತಾರೆ. ವೆಬ್‌ಕಾಸ್ಟ್ ನೋಡಲು ಆಗದಿರುವವರೂ ಕೂಡಾ ಇಲ್ಲಿಗೆ ಸಂಪರ್ಕಗೊಂಡು, ಈ ಎರಡು ಗಂಟೆಗಳ ಕಾಲ ಧ್ಯಾನ ಮಾಡಬಹುದು ಮತ್ತು ಅದೇ ಪ್ರಯೋಜನ ಪಡೆಯಬಹುದು.

ಕೆಲವು ಸಲ ಜನರು ತಾವು ಕೆಟ್ಟವರು ಎಂದುಕೊಳ್ಳುತ್ತಾರೆ. ಇನ್ನು ಕೆಲವರು ತಾವು ತುಂಬಾ ತಪ್ಪುಗಳನ್ನು ಮಾಡಿದ್ದೇವೆ ಎಂದುಕೊಳ್ಳುತ್ತಾರೆ. ನಾವು ತಪ್ಪು ಮಾಡಿದ್ದೇವೆ ಎಂಬ ಅರಿವು ಇರುವುದು ಒಳ್ಳೆಯದು. ಈ ಅರಿವನ್ನು ಬಳಸಿಕೊಂಡು ನಾವು ತಪ್ಪು ಮಾಡುವುದನ್ನು ನಿಲ್ಲಿಸಬೇಕು. ನೀವು ಕೆಟ್ಟವರೆನಿಸಿದರೆ ಕೆಟ್ಟತನವನ್ನು ನಿಲ್ಲಿಸಿ. ನೀವು ತಪ್ಪು ಮಾಡಬಹುದು, ಆದರೆ ಅದು ನಿಮ್ಮನ್ನು ಕೆಟ್ಟವರನ್ನಾಗಿ ಮಾಡುವುದಿಲ್ಲ. ಆದರೆ ನೀವು ಕೆಟ್ಟವರು ಎಂದು ಯೋಚಿಸುತ್ತಿದ್ದರೆ ಒಂದು ರೀತಿಯ ನಕಾರಾತೆ ಬೆಳೆದು ಅದು ನಿಮ್ಮನ್ನು ಆವರಿಸುತ್ತದೆ. ಆಗ ನೀವು ನಿಜವಾಗಿಯೂ ಕೆಟ್ಟವರಾಗುತ್ತೀರಿ. ಇದನ್ನು ಎಂದಿಗೂ ಮಾಡಬೇಡಿ, ಇದರಿಂದ ನಿಮ್ಮನ್ನು ನೀವೇ ನಾಶಪಡಿಸಿಕೊಳ್ಳುವಿರಿ.

ಡಿಸೆಂಬರ್ 2012ಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸೂಚನೆಗಳಿಗಾಗಿ ಮತ್ತು ಮಾರ್ಗದರ್ಶನಕ್ಕಾಗಿ ಜನರು ಬರೆದು ಕೇಳುತ್ತಾರೆ: ನಾನು ಬ್ಯಾಂಕಿನಲ್ಲಿ ಸ್ವಲ್ಪ ಹಣವನ್ನು ಇಟ್ಟಿದ್ದೇನೆ, ಏನು ಮಾಡಲಿ? ಅದನ್ನು ಖರ್ಚು ಮಾಡಲೇ? ಜನರು ಇಂತಹ ಪ್ರಶ್ನೆಗಳನ್ನು ಕೇಳುತ್ತಾರೆ. ನೀವು ಸಹಜವಾಗಿ ಜೀವನ ಮಾಡಿ ಎಂದು ನಾನು ಸತತವಾಗಿ ಹೇಳುತ್ತಲೇ ಇದ್ದೇನೆ. ಪ್ರಪಂಚ ಕೊನೆಯಾಗುವುದಿಲ್ಲ. ಆಗುವುದೆಲ್ಲ ಆಗಲಿ. ಅವುಗಳನ್ನು ಎದುರಿಸೋಣ. ಚಿಂತಿಸಬೇಡಿ. ಏನೇ ಸಂಭವಿಸಿದರೂ ಅದನ್ನು ಎದುರಿಸುವುದಕ್ಕೆ ನಮ್ಮಲ್ಲಿ ಸಾಕಷ್ಟು ವಿವೇಕ ಮತ್ತು ಆಧ್ಯಾತ್ಮಿಕ ಬಲವಿದೆ. ನಾವು ಕಾದು ನೋಡೋಣ. ಆದರೆ ನೀವು ಆಧ್ಯಾತ್ಮಿಕವಾಗಿ ಸಿದ್ಧರಾಗಬೇಕು. ಒಳ್ಳೆಯವರಾಗಿರಿ. ಪ್ರಾಮಾಣಿಕವಾಗಿರಿ. ಯಾವಾಗಲೂ ಬೆಳಕನ್ನು ಹೊಂದಿರಿ. ನಾವು ಆಧ್ಯಾತ್ಮಿಕ ನೆಲೆಯಲ್ಲಿ ಸಿದ್ಧರಾಗಬೇಕೇ ಹೊರತು ಲೌಕಿಕ ನೆಲೆಯಲ್ಲಿ ಅಲ್ಲ. ನಾವು ಇದರ ಬಗ್ಗೆ ಪುಸ್ತಕಗಳನ್ನು ಬರೆದಿದ್ದೇವೆ, ಬೇಕಾದಷ್ಟು ಮಾತನಾಡಿದ್ದೇವೆ. 2012ರ ಅಂತ್ಯದ ಬಗ್ಗೆ ಎಲ್ಲಾ ಜ್ಞಾನವನ್ನು ಕೊಟ್ಟಿದ್ದೇವೆ ಎಂದು ನಾನು ತಿಳಿದುಕೊಂಡಿದ್ದೇನೆ. ಇನ್ನೂ ಹೆಚ್ಚಿನ ಜ್ಞಾನ ಎಂದರೆ ಹೆಚ್ಚಿನ ವಿವರಗಳು ಮಾತ್ರ. ನಮ್ಮಲ್ಲಿ ತಂತ್ರಗಳಿವೆ. ನಮ್ಮಲ್ಲಿ ಚೈತನ್ಯಗಳಿವೆ, ಋಷಿಗಳಿದ್ದಾರೆ. ಆದರೆ ನಾವು ಇವೆಲ್ಲವನ್ನೂ ಬಳಸಿಕೊಳ್ಳಬೇಕು.

21–10–2012

ಋಷಿಗಳಿಂದ ಸ್ಪಷ್ಟವಾದ ಒಂದು ಸಂದೇಶವಿದೆ: "ನವೆಂಬರ್ 14ರೊಳಗೆ ಹೃದಯದ ಮಟ್ಟದಿಂದ ಆರಿಸಿಕೊಳ್ಳಿ." ನಾನು, ಆಯ್ಕೆ ಮಾಡಿಕೊಳ್ಳುವುದರ ಬಗ್ಗೆ ಬಹಳ ಕಾಲದಿಂದ ಮಾತನಾಡುತ್ತಿದ್ದೇನೆ. ಕೆಲವರು ಆರಿಸಿಕೊಂಡಿದ್ದಾರೆ. ಇನ್ನು ಕೆಲವರು ಆರಿಸಿಕೊಂಡಿದ್ದೇವೆ ಎಂದು ತಿಳಿದುಕೊಂಡಿದ್ದಾರೆ, ಆದರೆ ಅದು ಮೇಲ್ನೋಟಕ್ಕೆ ಮಾತ್ರ. ನಾನು ಆತ್ಮದ ಮಟ್ಟದಿಂದ ಆರಿಸಿಕೊಳ್ಳುವುದರ ಬಗ್ಗೆ ಮಾತನಾಡುತ್ತಿದ್ದೇನೆ. ಋಷಿಗಳು ಹೇಳುತ್ತಾರೆ: 'ನೀವು ಆರಿಸಿಕೊಳ್ಳಿ, ನಾವು ನಿಮ್ಮ ಕರ್ಮಗಳನ್ನು ಕಳೆಯುತ್ತೇವೆ.' ಇದೊಂದು ಅತ್ಯುತ್ತಮ ಅವಕಾಶ ಎಂದು ನಾನು ತಿಳಿದುಕೊಂಡಿದ್ದೇನೆ. ನಾವು 2012ರಿಂದ ಪಾರಾಗಲು ಋಷಿಗಳು ಸಾಧ್ಯವಿರುವ ಎಲ್ಲಾ ರೀತಿಯಿಂದ ಪ್ರಯತ್ನಿಸುತ್ತಿದ್ದಾರೆ. ಈಗಾಗಲೇ ಪ್ರಕ್ಷುಬ್ಧತೆ, ಉಗ್ರಕ್ಷೋಭೆಗಳು ಕಾಣಿಸಿಕೊಂಡಿವೆ. ಗೊಂದಲ ಹೆಚ್ಚುತ್ತದೆ. ಈ ಗೊಂದಲವನ್ನು, ವ್ಯಕ್ತಿಗಳ ನಡುವಿನ ಘರ್ಷಣೆಯನ್ನು, ನಿಮ್ಮ ಕುಟುಂಬದ ಸದಸ್ಯರು ಅಥವಾ ಯಾರೊಂದಿಗಾದರೂ ಆಗುವ ಘರ್ಷಣೆಗಳನ್ನು ನೀವೇ ನಿರ್ವಹಿಸಬೇಕು. ಇದನ್ನು ಒಂದು ರೀತಿಯ ಪರೀಕ್ಷೆ ಎಂದು ತಿಳಿಯಬಹುದು. ನಾವು ಜಾಗರೂಕತೆಯಿಂದ ಇರಬೇಕು. ಭಯಗ್ರಸ್ತರಾಗಬಾರದು. ನಾವು ಸುರಕ್ಷಿತ ಕೈಗಳಲ್ಲಿದ್ದೇವೆ. ನಿಮ್ಮಲ್ಲಿ ಏನಾದರೂ ಕೊರತೆ ಇದ್ದರೂ ಕೂಡ ಅವರು, 'ಚಿಂತಿಸಬೇಡಿ, ಬನ್ನಿ' ಎಂದು ಹೇಳುತ್ತಾರೆ. ಆದರೆ ನಾವು ಆರಿಸಿಕೊಳ್ಳಬೇಕು ಮತ್ತು ಬದಲಾಗಬೇಕು. ಅದು ಬಹಳ ಸರಳ. ಆದರೆ ನಮ್ಮೊಂದಿಗೆ ಅಹಂ ಆಟವಾಡಲು ನಾವು ಅನುಮತಿಸಿದರೆ ಕೆಲವು ಸಲ ತುಂಬ ಕಷ್ಟವಾಗುತ್ತದೆ. ಬಹುಶ: ಅಹಂಗೆ, 'ನೀನು ನನಗೆ ಸಹಾಯ ಮಾಡು, ಆದರೆ ನನಗಾಗಿ ನೀನು ಏನೂ ನಿರ್ಧರಿಸಬೇಡ' ಎಂದು ಹೇಳಲು ಇದು ಅತ್ಯಂತ ಒಳ್ಳೆಯ ಅವಕಾಶವೆನ್ನಬಹುದು. ನಾವು ಒಮ್ಮೆ ನಮ್ಮ ಉದ್ದೇಶವನ್ನು ಸ್ಪಷ್ಟವಾಗಿಸಿದರೆ, ಅಹಂ ನಮಗೆ ಸಹಾಯ ಮಾಡುತ್ತದೆ. ಕೆಟ್ಟ ಕರ್ಮಗಳು ಕೂಡಾ ನಮಗೆ ಸಹಾಯಮಾಡುತ್ತವೆ.

ಇದಕ್ಕೆ ಇನ್ನೊಂದು ಭಾಗ ಕೂಡಾ ಇದೆ. ಒಮ್ಮೆ ನೀವು ಆಯ್ಕೆ ಮಾಡಿದ ಮೇಲೆ, ಹಿಂದೆಗೆಯಬೇಡಿ. ಒಮ್ಮೆ ಈ ಕರ್ಮಗಳೆಲ್ಲ ಕಳೆದರೆ ಮತ್ತೆ ಕರ್ಮಗಳನ್ನು ಸೇರಿಸಬೇಡಿ. ಆಯಾ ದಿನದ ಕರ್ಮಗಳನ್ನು ಕಳೆಯಲು ದೈನಿಕ ಧ್ಯಾನಗಳು ಸಾಕು. ಎಲ್ಲ ಕಾಲದಲ್ಲಿ ಪ್ರೀತಿ ಮತ್ತು ಶಾಂತಿಯನ್ನು ವ್ಯಕ್ತಪಡಿಸಿ ಎಂದು ಋಷಿಗಳು ಹೇಳುತ್ತಾರೆ. ಒಮ್ಮೆ ಕರ್ಮಗಳು ಕಳೆದರೆ ಭಗವಾನ್ ಕಲ್ಕಿ ನಮ್ಮನ್ನು ಸೂಕ್ಷ್ಮಮಟ್ಟದಲ್ಲಿ ಮಾರ್ಗದರ್ಶಿಸುತ್ತ ಎಲ್ಲ ಮಟ್ಟಗಳಲ್ಲಿ ನಮ್ಮನ್ನು ರಕ್ಷಿಸುತ್ತಾರೆ. ನಾವು ಏನು ಮಾಡಬೇಕೆಂದು ಅವರು ಹೇಳುತ್ತಾರೆ. ನಾನು ವಿವರಿಸುತ್ತಿರುವ ಸರಳ ವಿಷಯಗಳನ್ನು ಪಾಲಿಸಿದರೆ, ಅದಷ್ಟೇ ಸಾಕು. ನೀವು ಒಬ್ಬರೇ ಕುಳಿತು ಭಗವಾನ್ ಕಲ್ಕಿಯನ್ನು ಪ್ರಾರ್ಥಿಸಿದರೆ, ನಿಮಗೆ ಎಲ್ಲವೂ ಸ್ಪಷ್ಟವಾಗುವುದನ್ನು ನೀವು ಕಾಣುವಿರಿ. ನಾವು ಇವನ್ನೆಲ್ಲಾ ಅನುಸರಿಸಬೇಕು.

ಜೀವಶಕ್ತಿ, ಮಹಾವಿಷ್ಣುವಿನಿಂದ ಬಂದಿರುವ ಒಂದು ವಿಶೇಷ ಚೈತನ್ಯ. ಈ ಬ್ರಹ್ಮಾಂಡದಲ್ಲಿನ ಎಲ್ಲ ಭೂಮಿಗಳ ಮೇಲೆ ಈ ಚೈತನ್ಯ ಇದೆ. ಈ ಬ್ರಹ್ಮಾಂಡದ ಸೃಷ್ಟಿಯಾದ ಮೇಲೆ, ಬೇರೆ ಬೇರೆ ದೈವೀ ಲೋಕಗಳಿಂದ ಚೈತನ್ಯಗಳನ್ನು ತಂದು ಇಲ್ಲಿಡಲಾಗಿದೆ. ಜೀವಶಕ್ತಿ ಇಂತಹ ಒಂದು ಅದ್ಭುತ ಚೈತನ್ಯ. ಇದನ್ನು ನಾವೆಲ್ಲರೂ ಹೊಂದಿದ್ದೇವೆ, ಆದರೆ ನಮಗಿದು ತಿಳಿದಿಲ್ಲ. ಅದು ತಾನಾಗಿ ವ್ಯಕ್ತಗೊಳ್ಳಲು ಪ್ರಯತ್ನಿಸಿದರೆ, ಅದು ಹೇಗೋ ನಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ, ಕೆಲವು ಸಲ ನಾವು ಅದನ್ನು ಅದುಮಿಡುತ್ತೇವೆ. ನಮಗೆ ಈ ಜೀವಶಕ್ತಿಯ ಬಗ್ಗೆ ತಿಳಿದಿರಬೇಕು. ನೀವು ಯಾವಾಗಲೂ ಹಾಡುವ, ನಲಿಯುವ ಮತ್ತು ಪೂರ್ಣವಾಗಿ ಬದುಕುವ ಮನಃಸ್ಥಿತಿಯಲ್ಲಿರಬೇಕು. ಆಗ ಮಾತ್ರ ನಾವು ಏನನ್ನು ಅನುಭವಿಸಬೇಕೆಂದು ನಿರ್ಧಾರಿತವಾಗಿತ್ತೋ ಅದನ್ನು, ಅಂದರೆ, ದೇವರನ್ನು ಅವನ ವೈವಿಧ್ಯತೆಗಳಲ್ಲಿ ಅನುಭವಿಸಬಹುದು. ಇಡೀ ವಿಶ್ವ ನಿಮಗೆ ಸಹಾಯಮಾಡಲು, ಮಾರ್ಗದರ್ಶಿಸಲು, ಪ್ರೋತ್ಸಾಹಿಸಲು ಮತ್ತು ಸ್ಫೂರ್ತಿ ನೀಡಲು ನಿಮ್ಮೊಂದಿಗೆ ಇರುತ್ತದೆ.

ಸದುದ್ದೇಶದಿಂದ ಕೂಡಿದ ನಿರ್ಮಲ ಪ್ರೇಮ ಹೆಚ್ಚಿನ ಸಮಸ್ಯೆಗಳನ್ನು ಪರಿಹರಿಸುತ್ತದೆ, ಆದರೆ ನಾವು ಆ ಪ್ರಯತ್ನ ಮಾಡಬೇಕು. ಬದಲಾಗಿ ನಾವು ನಮ್ಮದೇ ಸ್ವಂತ ನೆಲೆಯಲ್ಲಿದ್ದು ಕಾದಾಡುತ್ತೇವೆ. ಪ್ರತಿ ವ್ಯಕ್ತಿಯೂ ವಿಭಿನ್ನ. ನಾವು ಇನ್ನೊಬ್ಬ ವ್ಯಕ್ತಿಯನ್ನು ಅವರು ಇದ್ದಂತೆ ಒಪ್ಪಿಕೊಂಡರೆ ಗೊಂದಲವಿರುವುದಿಲ್ಲ. ನಾವು ಅದನ್ನು ಅತ್ಯಂತ ಪ್ರಾಮಾಣಿಕವಾಗಿ ಮತ್ತು ಗಂಭೀರವಾಗಿ ಪ್ರಯತ್ನಿಸಬೇಕು. ನಾವು ಎಲ್ಲವನ್ನು ದೇವರ ಕಾಣಿಕೆ ಎಂದು ಒಪ್ಪಿಕೊಳ್ಳಬೇಕು. ಆದರೆ ಸಾಮಾನ್ಯವಾಗಿ ನಾವು ಒಪ್ಪಿಕೊಳ್ಳುವುದಿಲ್ಲ.

ಮುಕ್ತಿ ಅಥವಾ ವಿಮೋಚನೆ ಒಂದು ಅಗಾಧವಾದ, ದೀರ್ಘವಾದ ಮತ್ತು ನಿರಂತರವಾದ ಪ್ರಕ್ರಿಯೆ. ಮೊದಲು ನಾವು ನಮ್ಮ ತಪ್ಪು ಭಾವೋದ್ವೇಗಗಳು, ನಕಾರಾತ್ಮಕ ಯೋಚನೆಗಳು ಮತ್ತು ನಮ್ಮ ಪೂರ್ವಾಗ್ರಹಗಳಿಂದ ಮುಕ್ತರಾಗಬೇಕು. ಅದು ಸುಲಭವಲ್ಲ. ನಾವು ಉನ್ನತ ಮಟ್ಟದಲ್ಲಿ ಬಾಳಲು ಪ್ರಯತ್ನಿಸಿದಾಗ ಇದು ಸಾಧ್ಯ. ವಿಮೋಚನೆ ನಮ್ಮೊಳಗಿನಿಂದ ಪ್ರಾರಂಭಿಸುತ್ತದೆ, ನಾವು ಅದನ್ನು ಮುಂದುವರಿಯಲು ಅನುಮತಿಸಬೇಕು. ಈ ಭೂಮಿಯ ಮೇಲಿನ ಬದುಕು ಅಪರಿಪೂರ್ಣ. ನಮ್ಮಲ್ಲಿ ಮತ್ತು ಬೇರೆಯವರಲ್ಲಿ

# ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ಲೋಪದೋಷಗಳಿವೆ. ಇವೆಲ್ಲ ವಿಷಯಗಳನ್ನು ತಿಳಿದು ಮತ್ತು ಅನುಭವಿಸಿ ನಾವು ಉನ್ನತ ನೆಲೆಯಲ್ಲಿ ಬಾಳಬೇಕು. ಆಗ ಮಾತ್ರ ನಾವು ಕೆಳಮಟ್ಟದ ಭಾವೋದ್ವೇಗಗಳು ಮತ್ತು ಆಲೋಚನೆಗಳಿಂದ ಮುಕ್ತರಾಗುತ್ತೇವೆ. ಒಮ್ಮೆ ನೀವು ಉನ್ನತ ನೆಲೆಯನ್ನು ತಲುಪಿದ ಮೇಲೆ, ಅಲ್ಲಿಂದ ಮತ್ತೆ ನೀವು ಇನ್ನೂ ಉನ್ನತ ನೆಲೆಯನ್ನು ತಲುಪಲು ಪ್ರಯತ್ನಿಸಬೇಕು. ಆಗ ಕೆಳಗಿನ ನೆಲೆಯಿಂದ ಮುಕ್ತಿ ದೊರಕುತ್ತದೆ. ಮುಕ್ತಿಗೆ ಅನೇಕ ನೆಲೆಗಳಿವೆ. ಮಹಡಿ ಮೆಟ್ಟಿಲುಗಳನ್ನು ಊಹಿಸಿಕೊಳ್ಳಿ. ಮೇಲಿನ ಮೆಟ್ಟಲಿಗೆ ಹೆಜ್ಜೆಯನ್ನು ಇಟ್ಟಾಗ ಮಾತ್ರ ಮುಂದೆ ಹೋಗುತ್ತೀರಿ, ಇಲ್ಲದಿದ್ದರೆ ಕೆಳಗಿನ ಮೆಟ್ಟಿಲಿಗೇ ಅಂಟಿಕೊಂಡಿರುತ್ತೀರಿ. ವಿಮೋಚನೆ ಒಂದು ಬಹಳ ಸುಲಭ ಪ್ರಕ್ರಿಯೆ. ಜನರು ನನಗೆ ಹತ್ತಿರವಾದಾಗ, ಅವರಲ್ಲಿ ಇದು ಸಂಭವಿಸುವುದನ್ನು ಕಂಡಿದ್ದೇನೆ. ಒಂದು ಸನ್ನಿವೇಶದಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ ಎಂದು ಮನಗಂಡಾಗ ಅವರು ಅದನ್ನು ಒಪ್ಪಿಕೊಳ್ಳುತ್ತಾರೆ. ಜನರು ಬದಲಾಗುತ್ತಿದ್ದಾರೆ. ಅದು ಭಯ ಮತ್ತು ಅಭದ್ರತೆ ಇತ್ಯಾದಿಗಳಿಂದ ಒಂದು ರೀತಿಯ ವಿಮೋಚನೆ. ನೀವು ದೇವರೊಂದಿಗೆ ಇದ್ದಮೇಲೆ, ಬೆಳಕನ್ನು ಹೊಂದಿರುವಾಗ ಏತಕ್ಕಾಗಿ ಭಯ ಪಡಬೇಕು? ಬೆಳಕನ್ನು ಒಪ್ಪಿಕೊಳ್ಳಿ. ಬೆಳಕೇ ದೇವರು. ದೇವರು ನಿಮ್ಮ ಜೊತೆ ಇದ್ದಾನೆ. ಒಂದು ನೆಲೆಯಿಂದ ಮುಕ್ತರಾಗಿ ಮತ್ತೊಂದು ಉನ್ನತ ನೆಲೆಗೆ ಏರಿದರೆ, ನೀವು ಅಂತಿಮವಾಗಿ ದೇವರನ್ನು ತಲುಪುವಿರಿ. ಬೆಳಕನ್ನು ತಲುಪಿದಾಗ ನೀವು ಅದರೊಂದಿಗೆ ಐಕ್ಯವಾಗುವುದಿಲ್ಲ, ಆದರೆ ನೀವು ಬೆಳಕಿನೊಂದಿಗೆ ಇರುವಿರಿ. ಅದು ಅಂತಿಮ ವಿಮೋಚನೆ ಅಥವಾ ಮುಕ್ತಿ. ಅಲ್ಲಿಯವರೆಗೂ ಅದೊಂದು ವಿಮೋಚನೆಯ ಪ್ರಕ್ರಿಯೆ. ನೀವು ಗಂಭೀರವಾಗಿ ಪ್ರಯತ್ನಿಸಿ, ಮುಕ್ತಿ ಪಡೆಯಿರಿ. ಆಗ ನಿಮ್ಮ ಬದುಕಿನ ಸ್ಥಿತಿ ಅತ್ಯಂತ ಸುಂದರ, ಅದ್ಭುತ ಆಗಿರುತ್ತದೆ. ನೀವು ಎಲ್ಲ ಸಮಯದಲ್ಲೂ ದೇವರನ್ನು ಅನುಭವಿಸಬಹುದು.

---

ದೇವರು ನಮ್ಮೊಂದಿಗೆ ಮಾತನಾಡಲು ಕಾಯುತ್ತಿದ್ದಾನೆ. ನಾವು ಅವನನ್ನು ಆಲಿಸಲು ಗಂಭೀರವಾಗಿ ಪ್ರಯತ್ನಿಸಿಲ್ಲ. ನೀವು ಈ ಕ್ಷಣ ದೇವರ ಜೊತೆ ಮಾತನಾಡಲು ಬಯಸಿದರೆ ಅವನು ಯಾವುದೇ ವಿಷಯದ ಬಗ್ಗೆ, ಎಲ್ಲಿಯಾದರೂ ಸರಿ, ಯಾವಾಗಲಾದರೂ ಸರಿ ಮಾತನಾಡುತ್ತಾನೆ. ಅವನು ನಮ್ಮೊಳಗೆ, ನಮ್ಮ ಸುತ್ತ ಎಲ್ಲೆಲ್ಲಿಯೂ ಇದ್ದಾನೆ. ಆದರೆ ಮೊದಲು ನೀವು ಮೌನವಾಗಬೇಕು, ಶಾಂತವಾಗಬೇಕು ಮತ್ತು ಅವನ ಬಗ್ಗೆ ಅರಿವಿರಬೇಕು. ನಂತರ ಅವನಿಗೆ ಪ್ರೀತಿಯನ್ನು ಕಳುಹಿಸಬೇಕು. ಪ್ರಾರಂಭದಲ್ಲಿ ನಾವು ತುಂಬ ಊಹೆ ಮಾಡಿಕೊಳ್ಳುತ್ತೇವೆ ಅಥವಾ 'ಇಲ್ಲ, ನಾನು ಮಾತನಾಡಲಾರೆ' ಎನ್ನುತ್ತೇವೆ. ಮನಸ್ಸು ದೇವರ ಹಾಗೆ ನಡೆದುಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ನೀವು ಜಾಗರೂಕರಾಗಿದ್ದರೆ ನಿಮ್ಮ ಸ್ವಂತ ಮನಸ್ಸಿನಿಂದ ಬರುವ ಸಂದೇಶಕ್ಕೆ, ದೇವರಿಂದ ಬರುವ ಸಂದೇಶಕ್ಕೆ ಅಂತರವನ್ನು ಗುರುತಿಸಬಹುದು. ನೀವು ತಾಳ್ಮೆ, ಪ್ರೀತಿ ಮತ್ತು ಶಾಂತಿಗಳಿಂದ ಕೂಡಿರಬೇಕು. ಇದಕ್ಕಾಗಿ ನೀವು ಬಹಳ ಸಮಯ ಕಳೆಯಬೇಕಾಗುತ್ತದೆ. ಇದು ಸಾಧ್ಯವಿದೆ, ಇದು ಕಷ್ಟವಲ್ಲ.

**28–10–2012**

ನಮ್ಮ ಪುಸ್ತಕಗಳು ಚೈತನ್ಯಗಳನ್ನು ಹೊಂದಿರುತ್ತವೆ. ಅವುಗಳನ್ನು ಬಿಡುಗಡೆ ಮಾಡಿದಾಗ ಋಷಿಗಳು ಆಶೀರ್ವದಿಸುತ್ತಾರೆ. ಮುದ್ರಣವಾಗಿರುವ ಪುಸ್ತಕಗಳೆಲ್ಲ ಮತ್ತು ಮುದ್ರಣವಾಗಲಿರುವ ಪುಸ್ತಕಗಳೆಲ್ಲ ಆಶೀರ್ವಾದ ಪಡೆದಿವೆ. ಡಿವಿಡಿ, ವೆಬ್‌ಕಾಸ್ಟ್ ಕೂಡಾ ಚೈತನ್ಯಗಳನ್ನು ಹೊಂದಿವೆ. ನೀವು ವೆಬ್‌ಕಾಸ್ಟ್ ನೋಡಿದಾಗ ಅವನ್ನು ಅನುಭವಿಸಬಹುದು. ಈ ಚೈತನ್ಯಗಳೊಂದಿಗೆ ನೀವು ಸಂಪರ್ಕಿತರಾದಾಗ, ವೆಬ್‌ಕಾಸ್ಟ್‌ನಲ್ಲಿ ಹೇಳುತ್ತಿರುವ ವಿಷಯಗಳ ಬಗ್ಗೆ ಇನ್ನೂ ಹೆಚ್ಚು ಅರ್ಥಮಾಡಿಕೊಳ್ಳುವಿರಿ.

---

ಈಗ, ಪ್ರಪಂಚದ ಪ್ರತಿಯೊಂದು ವ್ಯವಸ್ಥೆಯೂ ಅಂತಿಮ ಘಟ್ಟವನ್ನು ತಲುಪಿದೆ. ಅವು ಪತನವಾಗಲೇ ಬೇಕು, ಪರಿಷ್ಕರಣೆ ಅಸಾಧ್ಯ. ಅತ್ಯಂತ ಮುಖ್ಯವಾದ ಅಂಶವೆಂದರೆ ನಾವು ಹೊಸಯುಗಕ್ಕೆ ಪ್ರವೇಶಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಅಲ್ಲಿ ನಮಗಾಗಿ ಅನೇಕ ಅದ್ಭುತ ಕಾಣಿಕೆಗಳು ಕಾಯುತ್ತಿವೆ. ಪ್ರತಿಯೊಬ್ಬರೂ ಬದಲಾಗುವುದಿಲ್ಲ. ಜನರು ಬದಲಾಗಲು ಇಚ್ಛೆಪಡುವುದಿಲ್ಲ. ಇದು ಸಹಜ. ಬದಲಾಗಲು ಯಾರು ನಿರ್ಧರಿಸುವರೋ ಅವರಿಗೆ ಟೆಲಿಪತಿ, ಟೆಲಿಪೋರ್ಟಿಂಗ್, ಮನುಕುಲಕ್ಕೆ ಅದ್ಭುತ ಕೊಡುಗೆಗಳಲ್ಲೊಂದಾದ 'ಪ್ರಾಣ'ದ ಮೇಲೆ ಬದುಕುವ ಕೊಡುಗೆಗಳನ್ನು ನೀಡಲಾಗುವುದು. ಒಂದು ವಿಧಾನವೆಂದರೆ, ವಿಶೇಷ ತಂತ್ರಗಳನ್ನು ಪಡೆದುಕೊಂಡು, ಅವನ್ನು ಒಂದೇ ಸಮನೆ ಅಭ್ಯಾಸ ಮಾಡುವುದು. ಅವನ್ನು ಕರಗತ ಮಾಡಿಕೊಳ್ಳಲು ದಶಕಗಳು ಬೇಕು. ಇನ್ನೊಂದು ವಿಧಾನವೆಂದರೆ, ಶರಣಾಗುವುದು. ದೇವರಿಗೆ, 'ಇರುವಿಕೆ'ಗೆ ಸುಮ್ಮನೆ ಹೇಳಿ, 'ನಾನು ಪ್ರಾಮಾಣಿಕವಾಗಿ ಬದಲಾಗಲು ಬಯಸುತ್ತೇನೆ.' ನಿಮಗೆ ಈ ಅದ್ಭುತ ಕಾಣಿಕೆಗಳನ್ನು ಕೊಡಲಾಗುವುದು. ನನಗೆ ತಿಳಿದಂತೆ ಯೋಜನೆ ಎ, ಯೋಜನೆ ಬಿ, ಯೋಜನೆ ಸಿ,.... ಯೋಜನೆ ಜಡ್‌ಗಳನ್ನು ಬಳಸಲಾಗುವುದು. ನಾವೆಲ್ಲರೂ ವಿಭಿನ್ನರಾಗಿರುವುದರಿಂದ ನಮ್ಮ ವ್ಯವಹರಿಸುವ ರೀತಿ ಬೇರೆ ಬೇರೆ ಆಗಿರುತ್ತದೆ. ಬೆಳಕನ್ನು ಚಾನಲ್ ಮಾಡಿ. ಬೆಳಕನ್ನು ಹೊಂದಿರಿ. ನಮ್ಮ ಬದುಕಿನಲ್ಲಿ ಬೆಳಕು ಬಹಳ ಮುಖ್ಯವಾದ ಭಾಗವಾಗಿರಬೇಕು. ನಿಮ್ಮ ಧ್ಯಾನದ ತಂತ್ರಗಳು ಬೆಳಕನ್ನು ಅನುಭವಿಸುವುದನ್ನು ಒಳಗೊಂಡಿವೆ. ನೀವು ಈಗಿನಿಂದಲೇ ಬೆಳಕನ್ನು ಅನುಭವಿಸಲು ಪ್ರಾರಂಭಿಸಿ. ನಾನು ಋಷಿಗಳಿಂದ ಬರುವ ಸೂಚನೆಗಳಿಗಾಗಿ ಕಾಯುತ್ತೇನೆ.

---

ಒಬ್ಬ ಮಹಿಳೆ, 'ಕೆಲವು ಸಲ ನಾನು ಬೆಳಕಿನ ಚುಕ್ಕಿಗಳನ್ನು ನೋಡುತ್ತೇನೆ, ಅವು ಏನು?' ಎಂದು ನನ್ನನ್ನು ಕೇಳಿದರು. ಅವು ಚೈತನ್ಯಗಳು. ಅವು ಒಂದು ವಿಶೇಷ ಕೃಪೆಯನ್ನು ಸೂಚಿಸುತ್ತವೆ. ಕೆಲವು ಸಲ ಜನರಿಗೆ ಕಷ್ಟಗಳಿದ್ದಾಗ ಧ್ಯಾನ ಮಾಡಲು ಆಗುವುದಿಲ್ಲ. ಅವರಿಗೆ ಸಹಾಯ ಮಾಡಬೇಕಾಗುತ್ತದೆ. ಸಹಾಯ ಬರುತ್ತದೆ. ಅದು ಯಾವುದೇ ತರ್ಕವನ್ನು ಆಧರಿಸಿರುವುದಿಲ್ಲ. ಈ ರೀತಿ ಕೃಪೆ ಬಂದಾಗಲೆಲ್ಲ, ನೀವು ಬೆಳಕಿನ ಚುಕ್ಕಿಗಳನ್ನು ನೋಡುವಿರಿ. ಋಷಿಗಳಿಂದ ಸಂದೇಶಗಳು ಬಂದಾಗಲೆಲ್ಲ ನೀವು ಈ ರೀತಿಯ ಬೆಳಕಿನ ಚುಕ್ಕಿಗಳನ್ನು ಕಾಣುವಿರಿ. ಈ ಬೆಳಕನ್ನು ಕಂಡಾಗ, ಸಾಧ್ಯವಿದ್ದರೆ ನಿಮ್ಮ ಕಣ್ಣುಗಳನ್ನು ಮುಚ್ಚಿ, ಆಲಿಸಲು ಪ್ರಯತ್ನಿಸಿ, ಸಂದೇಶವನ್ನು ಗ್ರಹಿಸಲು ಯತ್ನಿಸಿ. ಯಾವುದೇ ಧ್ವನಿಯನ್ನು ನೀವು ಕೇಳುವುದಿಲ್ಲ, ಆದರೆ ಅಲ್ಲೊಂದು ಮಿಂಚುಂಟಾಗುತ್ತದೆ ಮತ್ತು ನೀವು ಸಂದೇಶವನ್ನು ಅರ್ಥಮಾಡಿಕೊಳ್ಳುತ್ತೀರಿ. ಅದನ್ನು ಓದಿ, ಒಪ್ಪಿಕೊಳ್ಳಿ. ವಿಶ್ಲೇಷಿಸಲು ಪ್ರಯತ್ನಿಸಬೇಡಿ.

---

ಧ್ಯಾನದಲ್ಲಿ ನಾವು ಬೆಳಕನ್ನು ಅನುಭವಿಸಲು ಸಾಧ್ಯವಾಗದಿರುವುದಕ್ಕೆ ಕಾರಣ, ನಾವು ಹೆಚ್ಚಿನ ಸಮಯ ಯಾಂತ್ರಿಕವಾಗಿ ಧ್ಯಾನ ಮಾಡುತ್ತೇವೆ. ನಾವು ಅಂತರಂಗದಲ್ಲಿ ಪ್ರೀತಿಯನ್ನು ಹೊಂದಿದ್ದರೆ, ತಕ್ಷಣವೇ ಬೆಳಕಿನ ಅನುಭವ ಪಡೆಯುತ್ತೇವೆ. ನಾವು ನಮ್ಮ ಅಂತರಂಗಕ್ಕೆ ಹೋಗಿ, ನಾವು ಸರಿಯಾದ ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿದ್ದೇವೆಯೇ ಎಂಬುದನ್ನು ಕಂಡುಕೊಳ್ಳಬೇಕು. ಈ ಮಾರ್ಗದಲ್ಲಿ ಇಷ್ಟೊಂದು ವರ್ಷಗಳು ಕಳೆದರೂ ನಮ್ಮ ಅಂತರಂಗದಲ್ಲಿ ನಕಾರತೆಗಳು ಮತ್ತು ದ್ವೇಷಗಳು ರಾಶಿಯಾಗಿದ್ದು, ನಾವು ಅವನ್ನು ಬಿಡಲು ಬಯಸುವುದಿಲ್ಲ. ನಾವು ಪ್ರೀತಿಯನ್ನು ವ್ಯಕ್ತಪಡಿಸುವುದಿಲ್ಲ. ಇನ್ನು ನೀವು ಬೆಳಕನ್ನು ಅನುಭವಿಸುವುದನ್ನು ಹೇಗೆ ನಿರೀಕ್ಷಿಸುತ್ತೀರಿ? ನಾವೆಲ್ಲ ವ್ಯಕ್ತಿಗತವಾಗಿ ವಿಭಿನ್ನ ಎಂದು ನನ್ನ ಅನಿಸಿಕೆ. ನಾವು ಬೆಳಕನ್ನು ಅನುಭವಿಸಲಾಗದಿರುವುದಕ್ಕೆ, ನಮಗೆ ನಮ್ಮದೇ ಆದ ಕಾರಣಗಳಿರುತ್ತವೆ. ಅವನ್ನು ನೀವೇ ಸ್ವತ: ಕಂಡುಕೊಳ್ಳಬೇಕೆಂದು ನಾನು ಬಯಸುತ್ತೇನೆ. ನೀವು ಕಂಡುಕೊಂಡಾಗ ಮತ್ತು ಅದನ್ನು ನಿಭಾಯಿಸಲು ಬಯಸಿದಾಗ, ನನ್ನ ಬಳಿಗೆ ಬನ್ನಿ. ನಾನು ಯಾವಾಗಲೂ ಇಲ್ಲಿರುವೆ.

---

ಒಬ್ಬ ವ್ಯಕ್ತಿ, 'ಡಿಸೆಂಬರ್ 12ರಲ್ಲಿ ಪ್ರವಾಸದ ಯೋಜನೆ ಇದೆ. ನಾನು ಹೋಗಬಹುದೇ? ದಯವಿಟ್ಟು ಸಲಹೆ ನೀಡಿ.' ಎಂದು ಕೇಳಿದರು. ಸಾಧ್ಯವಾದರೆ ನಿಮ್ಮ ಪ್ರವಾಸದ ಯೋಜನೆಯನ್ನು ಬದಲಿಸಿ, ಆಗದೆಹೋದರೆ ಚಿಂತಿಸಬೇಡಿ. ಬೆಳಕಿನೊಂದಿಗೆ ಸಂಪರ್ಕಿತರಾಗಿ, ಅಧ್ಯಾತ್ಮೀಕರಣಗೊಳ್ಳಿ, ಅಷ್ಟು ಸಾಕು. ನಿಮಗೆ ರಕ್ಷಣೆ ಸಿಗುತ್ತದೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀಸಿನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಜಯಂತ್‌ರವರ ಭಾಷಣದ ಆಯ್ದ ಭಾಗಗಳು

**ಸಂ: ಶೋಭಾ ಕೆ. ರಾವ್; ಅನು: ಸುಧಾಕರ್**

ಗುರೂಜಿಯವರು ಹೇಳುತ್ತಾರೆ, ನಾವು ಇಲ್ಲಿ ಕುಳಿತಿರುವುದು ಅಥವಾ ವೆಬ್‌ಕಾಸ್ಟ್ ನೋಡುತ್ತಿರುವುದು, ನಿಯಮಿತವಾಗಿ ಧ್ಯಾನ ಮಾಡುತ್ತಿರುವುದು, ಚೆಕಪ್‌ಗಳಿಗೆ ತಪ್ಪದೆ ಬರುತ್ತಿರುವುದು, ಇವೆಲ್ಲವೂ ನಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ಸೂಚಿಸುತ್ತವೆ. ನಮ್ಮ ಪ್ರಗತಿಯನ್ನು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನ ಮಾಡುವುದರಿಂದ ಕಂಡುಕೊಳ್ಳಬಹುದು: ನಾನು ನನ್ನ ಜೀವನದಲ್ಲಿ ಎಷ್ಟು ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದೇನೆ? ನನ್ನ ಹೃದಯದಲ್ಲಿ ಇನ್ನೂ ಕೋಪವಿದೆಯೇ? ನಾನು ನನಗೆ ಮತ್ತು ಇತರರಿಗೆ ಪ್ರಾಮಾಣಿಕನಾಗಿದ್ದೇನೆಯೇ? ನನಗೆ ಇನ್ನೂ ಕೋಪ ಬರುತ್ತದೆಯೇ ಮತ್ತು ಆ ನನ್ನ ಕೋಪವನ್ನು ಸಮರ್ಥಿಸಿಕೊಳ್ಳುತ್ತೇನೆಯೇ?

ನಮ್ಮ ಮಾರ್ಗದಲ್ಲಿ, ಆಧ್ಯಾತ್ಮಿಕವೆಂದರೆ ಒಳ್ಳೆಯವರಾಗಿರುವುದು ಮತ್ತು ಪ್ರಾಮಾಣಿಕರಾಗಿರುವುದು ಅಷ್ಟೆ ಎಂದು ನಿಚ್ಚಳವಾಗಿ ನಾವು ತಿಳಿದುಕೊಂಡಿದ್ದೇವೆ. ಇದು ಎಷ್ಟೊಂದು ಸರಳವಾದ ಮತ್ತು ಗಹನವಾದ ಹೇಳಿಕೆಯಾಗಿದೆ! ನಾವು ಒಳ್ಳೆಯವರಾಗಿದ್ದಾಗ ಸಹಜವಾಗಿಯೇ ಪ್ರಾಮಾಣಿಕರಾಗಿರುತ್ತೇವೆ, ಪ್ರೀತಿಯನ್ನು ಹೊಂದಿರುತ್ತೇವೆ, ಸಹಾನುಭೂತಿ ಉಳ್ಳವಾಗಿರುತ್ತೇವೆ. ಆಧ್ಯಾತ್ಮಿಕತೆಯು ಶಕ್ತಿಗಳ, ಸಾಮರ್ಥ್ಯಗಳ ಬಗ್ಗೆ ಅಲ್ಲ, ಅನುಭವಗಳ ಬಗ್ಗೆ ಕೂಡಾ ಅಲ್ಲ. ನಮ್ಮಲ್ಲಿ ಯಾವುದೇ ಸಾಮರ್ಥ್ಯಗಳು ಅಥವಾ ಶಕ್ತಿಗಳು ಇಲ್ಲದಿರಬಹುದು. ಆದರೆ ದೇವರ ಶಕ್ತಿಗಳು ನಮ್ಮ ಮೂಲಕ ಕೆಲಸ ಮಾಡುತ್ತಿರುತ್ತವೆ. ಆಧ್ಯಾತ್ಮಿಕ ವ್ಯಕ್ತಿ ಏನನ್ನಾದರೂ ಇಚ್ಛಿಸಿದಾಗ, ಅವನ ಇಚ್ಛೆಯನ್ನು ಪೂರೈಸಲು ದೇವರ ಶಕ್ತಿಗಳು ಕೆಲಸಮಾಡುತ್ತವೆ. ಸಹಜವಾಗಿಯೇ ಅವನ ಇಚ್ಛೆಗಳು ಯಾವಾಗಲೂ ಪ್ರೀತಿಯನ್ನು ಆಧರಿಸಿರುತ್ತವೆ.

ಒಬ್ಬ ವ್ಯಕ್ತಿಯನ್ನು ನಮ್ಮ ಗುರುವೆಂದು ಒಪ್ಪಿಕೊಳ್ಳುವುದು ಮತ್ತು ಅವನನ್ನು ಕಣ್ಣುಮುಚ್ಚಿ ಅನುಸರಿಸುವುದು ನಿಜವಾಗಿಯೂ ನಮಗೆ ಸಹಕಾರಿ. ಆಧ್ಯಾತ್ಮಿಕತೆಯಲ್ಲಿ ಬೆಳೆಯುವುದಕ್ಕೆ ಕೊನೆಯಿಲ್ಲ ಎನ್ನುವುದನ್ನು ಗುರೂಜಿಯವರಿಂದ ನಾವು ಅರಿತುಕೊಂಡಿದ್ದೇವೆ. ಗುರೂಜಿಯವರು ಜನರೊಂದಿಗೆ ಎಷ್ಟೊಂದು ಸಮರ್ಪಕವಾಗಿ ವ್ಯವಹರಿಸುವುದನ್ನು ನಾವು ನೋಡಿದ್ದೇವೆ; ಅವರು ಅಂಗಡಿಯವರೊಂದಿಗೆ ಎಂದಿಗೂ ಚೌಕಾಸಿ ಮಾಡುವುದಿಲ್ಲ. ಅವರ ಸಂಬಂಧ ವ್ಯಾಪಾರ–ವ್ಯವಹಾರವನ್ನು ಮೀರಿರುತ್ತದೆ. ಅದಕ್ಕೆ ಪ್ರತಿಯಾಗಿ, ಜನರೂ ಅದೇ ರೀತಿಯಲ್ಲಿ ಪ್ರತಿಸ್ಪಂದಿಸುತ್ತಾರೆ.

ನಾವು ಬೆಳಕನ್ನು ಆರಿಸಿಕೊಂಡಾಗ, ಚೈತನ್ಯಗಳು ನಮ್ಮ ಮೇಲೆ ಕೆಲಸಮಾಡಲು ಮತ್ತು ನಮಗೆ ಸಹಾಯಮಾಡಲು ಅನುವು ಮಾಡಿಕೊಡುತ್ತೇವೆ. ಆಗ ನಮ್ಮಲ್ಲಿ ಬದಲಾವಣೆಗಳು ತನ್ನಿಂತಾನೆ ಆಗುತ್ತದೆ. ಆದರೆ ನಾವು ನಮ್ಮ ನೋವುಗಳನ್ನು, ಕೋಪವನ್ನು ಮತ್ತು ದ್ವೇಷವನ್ನು ಪೋಷಿಸಿದರೆ, ಅದರ ಅರ್ಥ ನಾವು ಬೆಳಕನ್ನು ಆಯ್ದುಕೊಂಡಿಲ್ಲವೆಂದಾಗುತ್ತದೆ; ಏಕೆಂದರೆ ಬೆಳಕಿನಲ್ಲಿ ನಾವು ಕ್ಷಮಿಸುತ್ತೇವೆ, ನೋವನ್ನು, ಕೋಪವನ್ನು ಮತ್ತು ದ್ವೇಷವನ್ನು ದಾಟಿ ನಿಲ್ಲುತ್ತೇವೆ. ಹಾಗೂ ನಾವು ಯಾರಮೇಲಾದರೂ ದ್ವೇಷ ಅಥವಾ ಕೋಪವನ್ನು ಹೊಂದಿರಲು ಆಯ್ಕೆ ಮಾಡಿಕೊಂಡರೆ, ನಾವು ದುಷ್ಟ ಚೈತನ್ಯಗಳಿಗೆ ಚಾನಲ್ ಆಗುತ್ತೇವೆ ಎಂದು ಕೂಡಾ ನಾವು ಗುರೂಜಿಯವರಿಂದ ಕೇಳಿದ್ದೇವೆ. ನಾವು ನಮಗೆ ಹಾನಿಮಾಡಿಕೊಳ್ಳುತ್ತೇವೆ ಮತ್ತು ನಮ್ಮ ಸುತ್ತಮುತ್ತಲೂ ಅಸಂತೋಷ, ಉದ್ವೇಗ ಮತ್ತು ಒತ್ತಡಗಳನ್ನು ಹರಡುತ್ತೇವೆ. ಅಂಥವುಗಳನ್ನು ನಾವು ಹೊಂದಿರುವಾಗ ಸಹಜವಾಗಿಯೇ ನಾವು ಬೆಳಕನ್ನು ಹೊಂದಿರಲಾಗುವುದಿಲ್ಲ.

ಇತ್ತೀಚೆಗೆ ಸಾಮಾನ್ಯ ಮನುಷ್ಯನೊಬ್ಬ ಕಾವೇರಿ ನೀರಿನ ಸಮಸ್ಯೆ ಬಗ್ಗೆ ಮಾತನಾಡಿದಾಗ, ಅದು ನನ್ನ ಮನ ಕಲಕಿತು. ಆತ ಹೇಳಿದ, 'ನಾವೇಕೆ ನೀರನ್ನು ಹಂಚಿಕೊಳ್ಳಬಾರದು? ನಾವೆಲ್ಲರೂ ಭಾರತೀಯರು, ನಾವು ಹಂಚಿಕೊಂಡು ದೇವರನ್ನು ಪ್ರಾಮಾಣಿಕವಾಗಿ ಪ್ರಾರ್ಥಿಸಿದರೆ ದೇವರು ನಮಗೆ ನೀರನ್ನು ಕೊಡುತ್ತಾನೆ.' ಶಂಬಲದ ಜನರು ಇಂಥ ನಿಯಮಗಳನ್ನು ಪಾಲಿಸುತ್ತಾರೆ, ತ್ಯಾಗ ಮಾಡುತ್ತಾರೆ; ಆದ್ದರಿಂದ ದೇವರು ಅವರ ಮೇಲೆ ಉನ್ನತ ಕೊಡುಗೆಗಳನ್ನು ಸುರಿಸುತ್ತಾನೆ.

ತಪೋನಗರದಲ್ಲಿ ಹೀಲಿಂಗ್ ಚೈತನ್ಯಗಳು ಹೇರಳವಾಗಿವೆ ಮತ್ತು ಅವುಗಳ ಬಗೆಗಿನ ಜ್ಞಾನವೂ ಹೇರಳವಾಗಿದೆ. ನಮಗೆ ಹೀಲಿಂಗ್ ಚೈತನ್ಯಗಳು ಹೇಗೆ ಕೆಲಸ ಮಾಡುತ್ತವೆಂದು ಸಂಪೂರ್ಣವಾಗಿ ತಿಳಿಯದಿರಬಹುದು, ಆದರೆ ಹೀಲಿಂಗ್‌ನ ಹಿಂದೆ ಪ್ರೀತಿಯಿದೆ ಎಂದು ನಮಗೆ ತಿಳಿದಿದೆ.

ತೀವ್ರ ಕ್ಷೋಭೆಯ ಸಮಯದಲ್ಲಿ ನಾವೀಗ ಇದ್ದೇವೆ. ಅದು ಹೇಗೋ ನಕಾರಾತ್ಮಕತೆಗೆ ಶಕ್ತಿ ತುಂಬುವವರು ನಾವೇ ಎಂದು ನನಗನ್ನಿಸುತ್ತದೆ. ನಾವು ಅದಕ್ಕೆ ಆಸ್ಪದ ಕೊಡದಿರಲು ತೀರ್ಮಾನಿಸಿದರೆ ಅದು ದೂರ ಸರಿಯುತ್ತದೆ. ಆತ್ಮಸ್ವರೂಪಿಗಳಾದ ನಾವೇ ಈ ಶಾರೀರಿಕ ವ್ಯವಸ್ಥೆಯ ಒಡೆಯರು. ಈ ಶಾರೀರಿಕ ವ್ಯವಸ್ಥೆಯಲ್ಲಿ ಏನು ಇರಬೇಕು ಮತ್ತು ಏನು ಇರಬಾರದು ಎಂದು ತೀರ್ಮಾನಿಸುವವರು ನಾವೇ. ನಾವು ಯಾವಾಗ ಬೆಳಕನ್ನು ಆಯ್ಕೆ ಮಾಡಿಕೊಳ್ಳುತ್ತೇವೆಯೋ ಆಗ ಎಲ್ಲ ದಿಕ್ಕುಗಳಿಂದಲೂ ಸಹಾಯ ಹರಿದು ಬರುತ್ತದೆ. ಆಗ ನಮ್ಮ ಕರ್ಮಗಳೂ ಕೂಡಾ ನಮಗೆ ಸಹಾಯ ಮಾಡುತ್ತವೆ.

ಅಕೃತ್ಯಗಳ ಮತ್ತು ಅನ್ಯಾಯಗಳ ಬಗ್ಗೆ ಜನರು ಅಸಹನೆ ವ್ಯಕ್ತಪಡಿಸುತ್ತಿರುವುದನ್ನು ನನ್ನ ಸುತ್ತಮುತ್ತಲೂ ನೋಡುತ್ತಿದ್ದೇನೆ. ದುಷ್ಟತೆ ಹೋಗಬೇಕಾದರೆ, ದುಷ್ಟತನವನ್ನು ಅನುಸರಿಸುತ್ತಿರುವವರು ಪರಿವರ್ತಿತರಾಗಬೇಕು ಅಥವಾ ಅವರನ್ನು ಹಿಂದೆ ಸರಿಸಬೇಕು. ವಿನಾಶ ಅನಿವಾರ್ಯ ಎಂದು ನನಗನ್ನಿಸುತ್ತಿದೆ, ಆದರೆ ಅದು ನಮ್ಮನ್ನು ಅವಲಂಬಿಸಿದೆ. ವೈಯಕ್ತಿಕ ಮಟ್ಟದಲ್ಲಿ ನಾವು ಬಹಳಷ್ಟು ಜವಾಬ್ದಾರಿಗಳನ್ನು ಹೊರಬೇಕು. ■

## ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಶ್ಯಾಮಲಾದೇವಿ

**ಪ್ರ: ಹೊಸಯುಗದಲ್ಲಿ ಜೀವಿಸಲು ನಾವು ಹೊಸ ಮನೋಮಯಕೋಶ ಅಥವಾ ಹೊಸ ಮನಸ್ಸನ್ನು ಹೊಂದಿರಬೇಕು. ಅದನ್ನು ನಾವು ಪಡೆದುಕೊಳ್ಳುವುದು ಹೇಗೆ?**

ಉ: ಅದಕ್ಕೆ ಹಲವಾರು ರೀತಿಗಳಿವೆ. ನಾವು ದೇಹವನ್ನು ತೊರೆದಾಗ, ನಮ್ಮನ್ನು ಹೊಸಯುಗಕ್ಕೆ ಬೇಕಾಗಿರುವ ಹೊಸ ಮನಸ್ಸುಗಳು ಲಭ್ಯವಿರುವ ಜಾಗಕ್ಕೆ ಕರೆದೊಯ್ಯುತ್ತಾರೆ. ಕರ್ಮಗಳೂ ಒಳಗೊಂಡಂತೆ, ಹಳೆಯ ಮನೋಮಯ ಕೋಶದಲ್ಲಿ ಇರುವುದೆಲ್ಲದರೊಂದಿಗೆ ಹೊಸ ಮನಸ್ಸನ್ನು ನಮಗೆ ಕೊಡಲಾಗುವುದು. ನಾವು ಇಲ್ಲಿ ಬದುಕಿದ್ದಾಗಲೂ ಕೂಡ ಇದು ಸಾಧ್ಯವಿದೆ. ಆ ಜಾಗಕ್ಕೆ ನಮ್ಮನ್ನು ಸೂಕ್ಷ್ಮದೇಹದಲ್ಲಿ ಕರೆದೊಯ್ದು, ಹಳೆಯ ಮನಸ್ಸನ್ನು ತೆಗೆದು ಹೊಸ ಮನಸ್ಸನ್ನು ಅಳವಡಿಸಬಹುದು.

**ಪ್ರ: ನಾವು ಜ್ಞಾನೋದಯ ಹೊಂದಿದನಂತರ ಈ ಪ್ರಪಂಚದಲ್ಲಿ ಬದುಕುವುದು ಹೇಗೆ?**

ಉ: ಜ್ಞಾನೋದಯ ಹೊಂದಿರುವ ವ್ಯಕ್ತಿಗೆ ಈ ಪ್ರಪಂಚದಲ್ಲಿ ಬದುಕಲು ಯಾವುದೇ ಸಮಸ್ಯೆ ಇಲ್ಲ, ಏಕೆಂದರೆ ಜ್ಞಾನೋದಯ ಅಷ್ಟೊಂದು ಪ್ರೀತಿಯನ್ನು ತರುತ್ತದೆ. ಈ ಪ್ರೀತಿಯೊಂದಿಗೆ, ಅನೇಕ ಕುಂದುಕೊರತೆಗಳು ಮತ್ತು ಅಪರಿಪೂರ್ಣತೆಗಳಿರುವ ಇಡೀ ಮಾನವ ಸ್ತರವನ್ನು ನಾವು ಸರಿಹೊಂದಿಸಿಕೊಂಡು ಹೋಗಬಹುದು. ನಾವು ಜನರನ್ನು ಖಂಡಿಸುವುದಿಲ್ಲ ಮತ್ತು ಅವರಿಂದ ಕಡಿದುಕೊಳ್ಳುವುದಿಲ್ಲ. ನಾವು ಪ್ರೀತಿಯಿಂದ ಬದುಕುತ್ತೇವೆ. ಮತ್ತು ನಮ್ಮಲ್ಲಿ ಯಾವಾಗಲೂ ಒಂದು ರೀತಿಯ ಸಮಚಿತ್ತತೆ ಇರುತ್ತದೆ. ನಾವು ದೇವರಲ್ಲಿ ನೆಲೆಗೊಂಡಿರುತ್ತೇವೆ, ಪ್ರೀತಿಯಲ್ಲಿ ನೆಲೆಯೂರಿರುತ್ತೇವೆ. ಆಗ ನಾವು ವಿಶ್ವಾತ್ಮಕರಾಗಿರುತ್ತೇವೆ. ಜ್ಞಾನೋದಯ ಹೊಂದಿರುವ ವ್ಯಕ್ತಿ ಈ ಪ್ರಪಂಚದ ಪ್ರಜೆಯಷ್ಟೇ ಆಗಿರುವುದಿಲ್ಲ, ಇಡೀ ಈ ಸೃಷ್ಟಿಯ ಪ್ರಜೆಯಾಗಿರುತ್ತಾನೆ.

**ಪ್ರ: ಆಧ್ಯಾತ್ಮಿಕವಾಗಿ ಬೆಳೆಯಲು ನಮ್ಮನ್ನು ನಾವು ಹೇಗೆ ಪ್ರೇರೇಪಿಸಿಕೊಳ್ಳಬೇಕು?**

ಉ: ನಿಮಗೆ ಬೆಳೆಯುವ ಉತ್ಕಟ ಬಯಕೆ ಇದ್ದರೆ, ಅಷ್ಟು ಸಾಕು. ಅದು ನಿಮ್ಮನ್ನು ಪ್ರೇರೇಪಿಸುತ್ತದೆ. ನಿಮ್ಮ ಪ್ರಜ್ಞೆಯನ್ನು ಎತ್ತರಿಸಿ, ಆಕಾಶವನ್ನು ಅನುಭವಿಸಿ. ಅದು ಬರೀ ಆಕಾಶದತ್ತ ನೋಡುತ್ತಿರುವುದಲ್ಲ, ನೀವೇ ಆಕಾಶವಾಗಬೇಕು. ಅದು ಸಾಧ್ಯವಿದೆ. ಆಕಾಶಕ್ಕೆ, ನಮಗೆ ಕೊಡಲು ಬೇಕಾದಷ್ಟಿದೆ. ಅದು ನಿಮ್ಮನ್ನು ಅನೇಕ ಜೀವಮಾನಗಳವರೆಗೆ ಪ್ರೇರೇಪಿಸುತ್ತದೆ ಅಥವಾ ಸ್ಫೂರ್ತಿಯಿಂದಿಡುತ್ತದೆ. ನಿಮ್ಮನ್ನು ನೀವೇ ಪ್ರೇರೇಪಿಸಿಕೊಳ್ಳಲು ಬಯಸಿದರೆ, ನೀವು ಅಂತರ್ಮುಖಿಗಳಾಗಿ. ನಿಮ್ಮ ಪ್ರಗತಿಯ ಬಗ್ಗೆ ನಿಮಗೆ ನೀವೇ ಪ್ರಶ್ನಿಸಿಕೊಳ್ಳಿ. ನೀವು ಪ್ರಜ್ಞೆಯಲ್ಲಿ ವಿಸ್ತಾರಗೊಳ್ಳಲು ಏನಾದರೂ ಅಡ್ಡಿಪಡಿಸುತ್ತಿದ್ದರೆ, ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ ಮತ್ತು ಗುರುತಿಸಿ, ನಂತರ ಅದನ್ನು ತಿದ್ದಿಕೊಳ್ಳಿ ಮತ್ತು ಅದರಿಂದ ಹೊರಬನ್ನಿ. ಒಂದು ಪುಸ್ತಕವನ್ನು ಓದಿ, ಒಂದು ಒಳ್ಳೆಯ ಕಾದಂಬರಿಯನ್ನು ಕೂಡ ಓದಿ. ಸಂಗೀತವನ್ನು ಕೇಳಿ. ಅದು ನಿಮ್ಮನ್ನು ದೇವರತ್ತ ಕೊಂಡೊಯ್ಯುತ್ತದೆ. ಪ್ರಕೃತಿಯೊಂದಿಗೆ ಕೆಲಕಾಲ ಕಳೆಯಿರಿ. ಒಂದು ಮರದ ಕೆಳಗೆ ಕುಳಿತುಕೊಳ್ಳಿ. ಅದರೊಂದಿಗೆ ಮಾತನಾಡಿ. ಪ್ರಯತ್ನಗಳನ್ನು ಮಾಡದ ಹೊರತು ನಾವು ಬದಲಾಗುವುದಿಲ್ಲ. ಹೊರಗಿನ ಅಂಶಗಳು ಸಹಾಯ ಮಾಡಬಹುದು ಆದರೆ ನಾವು ಪ್ರಯಾಣಮಾಡಲು ಅವುಗಳಷ್ಟೇ ಸಾಕಾಗುವುದಿಲ್ಲ.

**ಪ್ರ: ಧ್ಯಾನ ನಂಬಿಕೆಯನ್ನು ಬಲಗೊಳಿಸುತ್ತದೆಯೇ?**

ಉ: ದೇವರನ್ನು ನಂಬದೆಯೇ, ಋಷಿಗಳನ್ನು ನಂಬದೆಯೇ, ಒಬ್ಬ ವ್ಯಕ್ತಿ ಧ್ಯಾನ ತೆಗೆದುಕೊಳ್ಳಬಹುದು. ಯಾವುದನ್ನೂ ನಂಬಬೇಡಿ. ನಿಮ್ಮನ್ನು ನೀವು ನಂಬಿ. ನಿಮಗೆ ಧ್ಯಾನ ತೆಗೆದುಕೊಳ್ಳುವಾಗ ನಂಬಿಕೆ ಇರದಿರಬಹುದು. ಪರವಾಗಿಲ್ಲ. ಆದರೆ ಒಮ್ಮೆ ನೀವು ಧ್ಯಾನ ಆರಂಭಿಸಿದ ಮೇಲೆ, ನೀವು ಅನೇಕ ಅಂಶಗಳನ್ನು ಅನುಭವಿಸುವಿರಿ. ಆಗ ನಂಬಿಕೆ ಸಹಜವಾಗಿಯೇ ಬರುತ್ತದೆ, ಯಾರೋ ಒಬ್ಬರು ಹೇಳುತ್ತಾರೆ ಎಂದಲ್ಲ, ನಾನು ನಿಮಗೆ ಹೇಳುತ್ತೇನೆ ಎಂದಲ್ಲ, ಆದರೆ ನೀವು ಸ್ವತಃ ಅನುಭವಿಸಿದ್ದೀರಿ ಎಂಬ ಕಾರಣದಿಂದ. ಧ್ಯಾನ ನಂಬಿಕೆಯನ್ನು ತರುತ್ತದೆ ಮತ್ತು ಅದನ್ನು ಬಲಗೊಳಿಸುತ್ತದೆ ಕೂಡ.

**ಪ್ರ: ಧ್ಯಾನದಲ್ಲಿ ಕಲ್ಪನೆ ಎಷ್ಟು ಸಹಾಯ ಮಾಡುತ್ತದೆ?**

ಉ: ಪ್ರಾರಂಭದಲ್ಲಿ ಕಲ್ಪನೆ ತುಂಬ ಮುಖ್ಯ. ನಾವು ಋಷಿಗಳಿದ್ದಾರೆಂದು ಕಲ್ಪಿಸಿಕೊಳ್ಳುತ್ತೇವೆ. ನಮ್ಮಲ್ಲಿ ಬೆಳಕಿದೆ ಎಂದು ಊಹಿಸಿಕೊಳ್ಳುತ್ತೇವೆ. ಒಮ್ಮೆ ನೀವು ಬೆಳಕಿದೆ ಎಂದು ಊಹಿಸಿಕೊಂಡರೆ ಬೆಳಕು ಬಂದು ನಿಮ್ಮಲ್ಲಿ ತುಂಬಿಕೊಳ್ಳುತ್ತದೆ. ಪ್ರತಿದಿನವೂ ಹೀಗೆ ಕಲ್ಪಿಸಿಕೊಳ್ಳುತ್ತಿದ್ದರೆ, ಬೆಳಕು ಹೆಚ್ಚುಹೆಚ್ಚು ಪ್ರಕಾಶಗೊಳ್ಳುತ್ತದೆ. ಕಲ್ಪನೆ, ಧ್ಯಾನದಲ್ಲಿ ಮಾತ್ರವಲ್ಲ, ಎಲ್ಲಕಡೆ ಮುಖ್ಯ.

**ಪ್ರ: ಪ್ರಭಾಮಂಡಲ ರಕ್ಷಾಕವಚದಂತೆ ಕೆಲಸಮಾಡುವುದೇ?**


ಉ: ಪ್ರಭಾಮಂಡಲ ನಮ್ಮ ಮನಸ್ಸಿನ ವಿಸ್ತರಿಸಿದ ಭಾಗ. ಅದು ನಮ್ಮ ಮನಸ್ಸಿನ ಸ್ಥಿತಿಯನ್ನು ಸೂಚಿಸುತ್ತದೆ. ಅದು ಇನ್ನೂ ಅನೇಕ ರೀತಿಗಳಲ್ಲಿ ನಮಗೆ ಸಹಾಯ ಮಾಡಬಹುದು ಅದರೆ ಅದು ರಕ್ಷಾಕವಚದಂತೆ ಕೆಲಸ ಮಾಡುವುದಿಲ್ಲ.

**ಪ್ರ: ನನಗೆ ಸ್ವತಃ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾದರೆ, ನಾನು ಗುರುವಿನ ಬಳಿಗೆ ಹೋಗುವ ಅವಶ್ಯಕತೆ ಇದೆಯೇ?**

ಉ: ಹೋಗಬೇಕಾಗಿಲ್ಲ. ನಾವು ಗುರುವಿನ ಬಳಿಗೆ ಹೋಗುವುದು ಕಲಿಯುವುದಕ್ಕಾಗಿ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| 2012 - End or Beginning | 100/- |
| Preparing for 2012 | 100/- |
| Light Body & Other Realities | 75/- |
| Master-Pupil Talks | 60/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 | 200/- |
| Guruji Speaks Part - I & II | each 200/- |
| Guruji Speaks Vol - 3 | 150/- |
| Guruji Speaks Vol 4, 5 & 6 | each 200/- |
| The Book of Reflections - Vol 1 & 2 | each 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis | 100/- |
| Pyramid Revelations | 75/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |



ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8

## ಆಧ್ಯಾತ್ಮಿಕ ಅನುಭವಗಳು

ಸಂ : ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಸೆಪ್ಟೆಂಬರ್ 3ರಂದು ನಾನು ವಿಮಾನದ ತಪಾಸಣೆ ನಡೆಸುತ್ತಿರುವಾಗ ಇದ್ದಕ್ಕಿದ್ದಂತೆ ಮಳೆ ಹನಿಯಲು ಆರಂಭವಾಯಿತು. ಅದು ಇನ್ನೂ ಹೆಚ್ಚಾಗುವ ಸಾಧ್ಯತೆ ಕಂಡುಬಂದು, ಅದರಿಂದಾಗಿ ವಿಮಾನ ಹೊರಡುವುದು ವಿಳಂಬವಾಗಬಹುದು ಮತ್ತು ಸಾಮಾನು ಸರಂಜಾಮುಗಳನ್ನು ವಿಮಾನದಲ್ಲಿ ತುಂಬಿಸುವುದನ್ನು ನಿಲ್ಲಿಸಬೇಕಾಗಬಹುದು ಎಂದೆನಿಸಿತು. ನಾವು ಶಾಲೆಯೊಂದರಲ್ಲಿ ಲೈಟ್ ಚಾನಲಿಂಗ್ ಸೆಷನ್ ನಡೆಸಲು ಈ ಮೊದಲೇ ನಿರ್ಧರಿಸಿದ್ದರಿಂದ, ನಾನು ದೇವರು ಮತ್ತು ಋಷಿಗಳನ್ನು ಸಹಾಯಕ್ಕಾಗಿ ಪ್ರಾರ್ಥಿಸಿದೆ. ಹನಿಯುತ್ತಿರುವ ಮಳೆ ನಿಂತಿತು, ಬಲವಾದ ಗಾಳಿ ಬೀಸಿ, ದಟ್ಟ ಮೋಡಗಳನ್ನೆಲ್ಲಾ ಚದುರಿಸಿತು. ದಿಲ್ಲಿಯ ವಿಮಾನ ನಿಲ್ದಾಣದ ಮೇಲೆ ಶುಭ್ರವಾದ ನೀಲಿ ಆಕಾಶ ಕಾಣಲಾರಂಭಿಸಿತು. ನಾನು ಮನೆ ತಲುಪಿದ ನಂತರ ಸುಮಾರು ಒಂದು ಗಂಟೆ ಕಾಲ ಜೋರಾಗಿ ಮಳೆ ಸುರಿಯಿತು!

– ಗುಲ್ಷನ್ ಕುಮಾರ್ ಸಿಂಘಾಲ್

ನನ್ನ ಹುಟ್ಟುಹಬ್ಬದ ದಿನವಾದ ಸೆಪ್ಟೆಂಬರ್ 5ರಂದು ನಾನು ಗುರೂಜಿಯವರನ್ನು ಆತ್ಮದ ಮಟ್ಟದಲ್ಲಿ ಸಂಪರ್ಕಿಸಲು ಪ್ರಯತ್ನಿಸಿ, ನನ್ನನ್ನು ಆಶೀರ್ವದಿಸುವಂತೆ ಕೇಳಿಕೊಂಡೆ. ತಕ್ಷಣ ಗುರೂಜಿಯವರ ಮುಗುಳ್ನಗೆಯ ಮುಖ ಕಾಣಿಸಿತು. ನನ್ನ ಮೇಲೆ ಬೆಳಕಿನ ವೃಷ್ಟಿಯಾದುದನ್ನು ಕೂಡಾ ನಾನು ಕಂಡೆ. ನಾನು ಕೇಳಿದ ಪ್ರಶ್ನೆಗಳಿಗೆ ಗುರೂಜಿಯವರು ಮುಗುಳ್ನಗುತ್ತಾ ಉತ್ತರಿಸಿದರು. ಅದು ನಿಜವಾಗಿಯೂ ಒಂದು ಆತ್ಮದ ಮಟ್ಟದ ಸಂಪರ್ಕ, ಎಂದು ನಂತರ ಗುರೂಜಿಯವರು ದೃಢಪಡಿಸಿದರು.

– ವಿಶಾಖ ವೈದ್ಯ

ಸೆಪ್ಟೆಂಬರ್ ಮೊದಲ ವಾರದಂದು ನನ್ನ ಕಛೇರಿಯಲ್ಲಿ ನನಗೆ ಅತಿಯಾದ ಗೊಂದಲ ಉಂಟಾಗಿತ್ತು. ಅದು ನನ್ನನ್ನು ಹಾದಿ ತಪ್ಪಿಸಲು ಪ್ರಯತ್ನಿಸುತ್ತಿರುವ ಒಂದು ರೀತಿಯ ಸಂಘರ್ಷ ಎಂದು ಅರಿವಾಯಿತು. ಬೆಳಕಿನ ಸಹಾಯದಿಂದ ಸ್ವಲ್ಪ ಶಾಂತನಾದೆ. ಅಂದು ಮಧ್ಯಾಹ್ನ ನಾನು ಅರೆ–ಎಚ್ಚರದ ಸ್ಥಿತಿಯಲ್ಲಿದ್ದಾಗ, ಇದ್ದಕ್ಕಿದ್ದಂತೆ ನನ್ನ ತಲೆಯ ಭಾಗದಲ್ಲಿ ಒಂದು ಚಟಪಟ ಶಬ್ದವಾಗಿ ನನಗೆ ಎಚ್ಚರವಾಯಿತು. ಆಗಿನಿಂದ ನಾನು ಹೆಚ್ಚು ಶಾಂತನಾಗಿದ್ದೇನೆ. ನಂತರ ಗುರೂಜಿಯವರು ಅದೊಂದು ಅನುಗ್ರಹ, ಒಂದು ಅನುಭವ ಎಂದು ತಿಳಿಸಿದರು.

– ಕಾರ್ತಿಕ್ ಎನ್.

ಕೆಲವು ತಿಂಗಳ ಹಿಂದೆ ಒಂದು ಸಂಜೆ ನನ್ನ ನಾಯಿಯೊಂದಿಗೆ ತಿರುಗಾಡುತ್ತಿದ್ದಾಗ, ಹಕ್ಕಿಗಳ ಕಲರವ ಕೇಳಿಬರುತ್ತಿತ್ತು. ಅವು ತಮ್ಮ ಗೂಡುಗಳಿಗೆ ಮರಳುತ್ತಿದ್ದವು. ನಾನು ಅವುಗಳಿಗಾಗಿ ಹುಡುಕುತ್ತಿದ್ದಾಗ, ತಕ್ಷಣ ನನಗೆ ಅವುಗಳ ಕಲರವದೊಂದಿಗೆ ಸಂಪರ್ಕ ಏರ್ಪಟ್ಟಿತು. ಮರುಘಳಿಗೆ, ಎಲ್ಲಕಡೆ ಬರೀ ಬೆಳಕನ್ನು ಕಂಡೆ ಮತ್ತು ನಾನು ವಿಸ್ತರಿಸಲಾರಂಭಿಸಿದೆ. ಇಲ್ಲಿನ ಅರಿವು ಇಲ್ಲದಾಯಿತು. ಹಾಗೆ ಎಷ್ಟು ಹೊತ್ತು ನಿಂತಿದ್ದೆನೋ ನನಗೆ ಗೊತ್ತಿಲ್ಲ. ನಂತರ ನನಗೆ ತಿಳಿವು ಬಂದಾಗ ನನ್ನಲ್ಲಿ ಶಕ್ತಿಯುತವಾದುದು ಏನೋ ಒಂದು ಇದೆ ಎನಿಸಿತು. ಆಗ ನಾನು ಒಂದು ಬೆಳಕಿನ ಪರ್ವತದಂತಿದ್ದೆ.

– ರಾಖಿ ಛೋಪ್ರ

'ಪಿರಮಿಡ್ ರೆವೆಲೇಶನ್' ಪುಸ್ತಕವನ್ನು ಓದಿದ ನಂತರ, ಸ್ವಲ್ಪ ಹೊತ್ತು ನಿದ್ರಿಸಿದೆ. ನಿದ್ದೆಯಲ್ಲಿ, ಒಂದು ಸುಂಟರಗಾಳಿ ನನ್ನನ್ನು ಒಂದು ಪಿರಮಿಡ್ ಬಳಿ ಕರೆದೊಯ್ದಿತು. ಅಲ್ಲಿ ನಾನು ಗುರೂಜಿ ಮತ್ತು ಮಾಸ್ಟರ್ 'ವಿ' ಅವರನ್ನು ಕಂಡೆ. ಮರುದಿನ ಎದ್ದಾಗ ನನಗೆ ಯಾವುದೋ ದೂರದ ಪ್ರಯಾಣದಿಂದ ಹಿಂದಿರುಗಿದಂತೆ ಅನಿಸುತ್ತಿತ್ತು.

– ಜಸ್‌ಪ್ರೀತ್ ಕೌರ್

ಇತ್ತೀಚೆಗೆ ಒಮ್ಮೆ ನಾನು ನಿದ್ರೆಯಲ್ಲಿ, ಗುರೂಜಿಯವರ ಪಕ್ಕದಲ್ಲಿ ವೇದಿಕೆಯ ಮೇಲೆ ಕುಳಿತು ಧ್ಯಾನ ಮಾಡುತ್ತಿದ್ದಂತೆ ಕಂಡುಬಂದಿತು. ನಾನು ಆಳವಾದ ನಿಶ್ಚಲತೆಯಲ್ಲಿದ್ದೆ ಮತ್ತು ಎಲ್ಲದರ ಅರಿವೂ ನನಗಿತ್ತು. ಇದ್ದಕ್ಕಿದ್ದಂತೆ ಒಬ್ಬ ಸ್ತ್ರೀ ಬಂದು ನನ್ನನ್ನು ಮೃದುವಾಗಿ ಎಳೆದು ಕೆಳಗೆ ಕೂಡಿಸಿದರು. ಒಬ್ಬ ಮನುಷ್ಯ ನನ್ನ ಪಾದ ಸ್ಪರ್ಶ ಮಾಡಲು ಪ್ರಯತ್ನಿಸುತ್ತಿದ್ದುದು ತಿಳಿಯಿತು. ಕೈಜೋಡಿಸಿ, 'ನಾನು ಏನೂ ಅಲ್ಲ' ಎಂದು ಅವರಿಗೆ ಹೇಳಿದೆ. ಆಗ ಗುರೂಜಿಯವರ ಮುಖದಲ್ಲಿ ಮುಗುಳ್ನಗೆ ಇತ್ತು. ಈ ಅನುಭವದ ನಂತರ ನಾನು ತುಂಬ ಪ್ರಶಾಂತವಾಗಿದ್ದೇನೆ.

– ಸಂಗೀತ ಪಾಟಿ

ಸಪ್ತಋಷಿಗಳು, ವಿಶ್ವಾಮಿತ್ರ ಮಹರ್ಷಿಗಳು ಮತ್ತು ಅಮರ ಮಹರ್ಷಿಗಳು ತಮ್ಮ ಪ್ರೀತಿಯಿಂದ ನನ್ನನ್ನು ಬಳಸಿರುವರೇನೋ ಎಂಬಂತೆ, ಅವರೆಲ್ಲರ ಚೈತನ್ಯಗಳು ನನ್ನ ಧ್ಯಾನದ ಪೂರ್ತಿ ಸಮಯ ನನಗೆ ಅತಿಸನಿಹದಲ್ಲೇ ಇರುವುದರ ಅನುಭವವಾಗುತ್ತದೆ. ನನ್ನ ಶಿರದಲ್ಲಿರುವ ಕಣ್ಣಿಗೆ ಕಾಣದ ಮುಚ್ಚಳವನ್ನು ತೆರೆಯಲು ಪ್ರಯತ್ನಿಸಿದಾಕ್ಷಣ, ಅಪಾರವಾದ ಬೆಳಕು ನನ್ನೊಳಗೆ ಪ್ರವಹಿಸಲು ಪ್ರಾರಂಭಿಸುತ್ತದೆ. ಅದಕ್ಕೆ ನಾನು ಯಾವುದೇ ಕೃತಕ ಪ್ರಯತ್ನಗಳನ್ನು ಮಾಡಬೇಕಾಗಿಲ್ಲ, ಅಪಾರವಾದ ಬೆಳಕನ್ನು ಆನಂದಿಸುವುದಷ್ಟೇ ಸಾಕು.

– ಯಾಸೂಜಿ ಯಾಮಾಗುಚಿ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ